# ಸಂಪರ್ಕ

ಬಿಎಸ್‌ಟಿಪಿ ಸುದ್ದಿಪತ್ರ

ಸಂಪುಟ 12 । ಆಗಸ್ಟ್–ಸೆಪ್ಟೆಂಬರ್ 2026 ಸಂಚಿಕೆ






## ವ್ಯವಸ್ಥಾಪಕ ನಿರ್ದೇಶಕರ ಆಶಯ ನುಡಿ




**ಶ್ರೀ ಲಕ್ಷ್ಮಣ್ ಸಿಂಗ್,** IRSE
ವ್ಯವಸ್ಥಾಪಕ ನಿರ್ದೇಶಕರು,
ಕ-ರೈಡ್ / ಬಿ-ರೈಡ್


## ನಮ್ಮ ಓದುಗರಿಗೆ ಶುಭಾಶಯಗಳು!

## ಪ್ರಗತಿಯ ಪಥದಲ್ಲಿ ಮುನ್ನಡೆ, ವೇಗಕ್ಕೆ ಮತ್ತಷ್ಟು ಉತ್ತೇಜನ ಮತ್ತು ಮಹತ್ವದ ಮೈಲಿಗಲ್ಲುಗಳ ಸಾಧನೆ

ಕಳೆದ ಒಂದೆರಡು ತಿಂಗಳುಗಳಲ್ಲಿ ಬೆಂಗಳೂರು ಉಪನಗರ ಸಾರಿಗೆ ಯೋಜನೆ (BSTP) ಅನುಷ್ಠಾನದಲ್ಲಿ ಹೊಸ ವೇಗ ಹಾಗೂ ಉತ್ತೇಜನಕಾರಿ ಪ್ರಗತಿ ಕಂಡುಬಂದಿರುವುದನ್ನು ಹಂಚಿಕೊಳ್ಳಲು ನನಗೆ ಸಂತೋಷವಾಗುತ್ತಿದೆ. ಬಿ–ರೈಡ್ ಸಂಸ್ಥೆಯಲ್ಲಿ ನಿರ್ಮಾಣ ಕಾಮಗಾರಿಗಳು, ಟೆಂಡರ್ ಪ್ರಕ್ರಿಯೆ, ಭೂಸ್ವಾಧೀನ, ರೈಲು ಬೋಗಿಗಳ ಖರೀದಿ ಹಾಗೂ ಹಣಕಾಸು ಚಟುವಟಿಕೆಗಳು ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಗಮನಾರ್ಹ ಪ್ರಗತಿಯನ್ನು ಸಾಧಿಸಲಾಗಿದೆ. ನಮ್ಮ ತಂಡಗಳು, ಗುತ್ತಿಗೆದಾರರು, ಸಲಹೆಗಾರರು ಮತ್ತು ಎಲ್ಲಾ ಪಾಲುದಾರರು ತೋರಿದ ಸಾಮೂಹಿಕ ಬದ್ಧತೆ ಹಾಗೂ ನಿರಂತರ ಪ್ರಯತ್ನಗಳೇ ಈ ಸಾಧನೆಗಳ ಹಿಂದಿನ ಪ್ರಮುಖ ಶಕ್ತಿಯಾಗಿವೆ. ಅವರ ನಿರಂತರ ಸಹಕಾರದಿಂದ ಹಲವು ಸವಾಲುಗಳನ್ನು ಎದುರಿಸಿ, ಯೋಜನೆಯ ಗುರಿಗಳತ್ತ ಮತ್ತಷ್ಟು ಸಮೀಪಿಸಲು ಸಾಧ್ಯವಾಗಿದೆ.

ನಿರ್ಮಾಣ ಕ್ಷೇತ್ರದ ಪ್ರಮುಖ ಮೈಲಿಗಲ್ಲುಗಳಲ್ಲಿ ಒಂದನ್ನು ಜುಲೈ 31, 2026ರಂದು ಸಾಧಿಸಲಾಯಿತು. ಕಾರಿಡಾರ್ 4A (ಕನಕ ಲೈನ್)ನ ಹುಸ್ಕೂರು ನಿಲ್ದಾಣದಲ್ಲಿ 15.45 ಮೀಟರ್ ಉದ್ದದ ಮೊದಲ ಟಿ–ಗರ್ಡರ್ ಅನ್ನು ಯಶಸ್ವಿಯಾಗಿ ಅಳವಡಿಸಲಾಯಿತು. ಇದು ಎತ್ತರದ ರೈಲು ಮೂಲಸೌಕರ್ಯ ನಿರ್ಮಾಣ ಕಾಮಗಾರಿಯಲ್ಲಿ ಗೋಚರಿಸುವಂತಹ ಮಹತ್ವದ ಪ್ರಗತಿಯನ್ನು ಸೂಚಿಸುತ್ತದೆ. ಆಗಸ್ಟ್ 19, 2026ರಂದು ಅಂದಾಜು ₹200.03 ಕೋಟಿ ವೆಚ್ಚದ (GST ಹೊರತುಪಡಿಸಿ) ಸೋಲದೇವನಹಳ್ಳಿ ರೈಲು ನಿರ್ವಹಣಾ ಡಿಪೋ ನಿರ್ಮಾಣ ಕಾಮಗಾರಿಯ ಬಿಡ್ ಸಲ್ಲಿಕೆ ಪ್ರಕ್ರಿಯೆಯನ್ನೂ ಯಶಸ್ವಿಯಾಗಿ ಪೂರ್ಣಗೊಳಿಸಲಾಯಿತು.

ಕಾರಿಡಾರ್–1ರ ವಯಾಡಕ್ಟ್ ಕಾಮಗಾರಿಗಳ ಭಾಗವಾಗಿ, IR ಯಶವಂತಪುರ ನಿಲ್ದಾಣದ ಮುಂಭಾಗದಲ್ಲಿ 450 ಮೀಟರ್ ಉದ್ದದ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಪ್ರಸ್ತುತ 88 ಪೈಲಿಂಗ್ ಕಾಮಗಾರಿಗಳ ಪೈಕಿ 34 ಪೂರ್ಣಗೊಂಡಿವೆ. ಇದೇ ವೇಳೆ, ಮೆಜೆಸ್ಟಿಕ್ (KSR) ನಿಂದ ದೇವನಹಳ್ಳಿಯವರೆಗೆ ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ. ಆದ್ಯತೆಯ ವಿಭಾಗವಾಗಿರುವ ಯಲಹಂಕದಿಂದ ದೇವನಹಳ್ಳಿ ವರೆಗೆ 25 ಕಿ.ಮೀ. ಉದ್ದದ ಪೈಕಿ 15 ಕಿ.ಮೀ. ಭಾಗಕ್ಕೆ ಜಂಟಿ ಮಾಪನ ಪ್ರಮಾಣಪತ್ರ (JMC) ಸ್ಕೆಚ್‌ಗಳ ಕಾರ್ಯ ಪೂರ್ಣಗೊಂಡಿದ್ದು, KSRನಿಂದ ಯಲಹಂಕದವರೆಗಿನ ಇತರೆ ವಿಭಾಗಗಳಲ್ಲಿ JMC ಕಾಮಗಾರಿಗಳು ಪ್ರಗತಿಯಲ್ಲಿವೆ.

ಆಗಸ್ಟ್ 21, 2026ರಂದು, ಜಪಾನ್ ಇಂಟರ್‌ನ್ಯಾಷನಲ್ ಅಸೋಸಿಯೇಷನ್ ಫಾರ್ ಇಂಡಸ್ಟ್ರಿ ಆಫ್ ಅರ್ಬನ್ ಡೆವಲಪ್‌ಮೆಂಟ್, ಬಿಲ್ಡಿಂಗ್ ಅಂಡ್ ಹೌಸಿಂಗ್ (JUBH) ಸಂಸ್ಥೆಯ ಜಪಾನಿನ ನಿಯೋಗವು ಬಿ–ರೈಡ್ ಕಾರ್ಪೊರೇಟ್ ಕಚೇರಿಗೆ ಭೇಟಿ ನೀಡಿತು. ಭಾರತದ ವಸತಿ, ವಾಸ್ತುಶಿಲ್ಪ ಮತ್ತು ನಗರಾಭಿವೃದ್ಧಿ ಕ್ಷೇತ್ರಗಳೊಂದಿಗೆ ಜಪಾನಿನ JUBH ನಿಯೋಗದ ವ್ಯಾಪಕ ಸಂವಾದದ ಭಾಗವಾಗಿ ಈ ಭೇಟಿ ನಡೆಯಿತು. ಬಲವಾದ ಆರ್ಥಿಕ ಹಾಗೂ ನಗರಾಭಿವೃದ್ಧಿ ಸಾಮರ್ಥ್ಯ ಹೊಂದಿರುವ ಭಾರತವು ಪ್ರಮುಖ ಮಾರುಕಟ್ಟೆಯಾಗಿ ಹೊರಹೊಮ್ಮುತ್ತಿರುವ ಹಿನ್ನೆಲೆಯಲ್ಲಿ, ಭಾರತೀಯ ಮಾರುಕಟ್ಟೆಯ ಕುರಿತು ಹೆಚ್ಚಿನ ಅರಿವು ಮೂಡಿಸುವುದು ಹಾಗೂ ಜಪಾನ್ ಮತ್ತು ಭಾರತದ ಸಂಸ್ಥೆಗಳ ನಡುವಿನ ಭವಿಷ್ಯದ ಸಹಕಾರದ ಅವಕಾಶಗಳನ್ನು ಗುರುತಿಸುವುದು ಈ ನಿಯೋಗದ ಉದ್ದೇಶವಾಗಿತ್ತು.

ಕಾರಿಡಾರ್–2 ಮತ್ತು 4ರಲ್ಲಿ, ಸೋಲದೇವನಹಳ್ಳಿ ಡಿಪೋ ಸೇರಿದಂತೆ ಟ್ರಾಕ್ಷನ್, ವಿದ್ಯುತ್ ಪೂರೈಕೆ, ಸ್ಕಾಡಾ, ಆಕ್ಸಿಲಿಯರಿ ಪವರ್ ಸಪ್ಲೈ ಹಾಗೂ ಸಂಬಂಧಿತ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯಲ್ಲಿಯೂ ಗಮನಾರ್ಹ ಪ್ರಗತಿ ಕಂಡುಬಂದಿದೆ. ಕಾರಿಡಾರ್–2 (ಮಲ್ಲಿಗೆ ಲೈನ್) ಪ್ಯಾಕೇಜ್–1ರ ಎತ್ತರಿಸಿದ ವಯಾಡಕ್ಟ್ ಕಾಮಗಾರಿಗೆ ₹1,665.61 ಕೋಟಿ ಮೊತ್ತದೊಂದಿಗೆ M/s CemIndia Projects ಸಂಸ್ಥೆಯು ಅತಿ ಕಡಿಮೆ ಬಿಡ್ಡುದಾರ ಸಂಸ್ಥೆಯಾಗಿ (L1) ಹೊರಹೊಮ್ಮಿದೆ. ಇದು ಕಾರಿಡಾರ್ ಅನುಷ್ಠಾನದಲ್ಲಿ ಮತ್ತೊಂದು ಮಹತ್ವದ ಹೆಜ್ಜೆಯಾಗಿದೆ.

ಪ್ರಗತಿ ಪರಿಶೀಲನೆ ಹಾಗೂ ಕಾಮಗಾರಿಗಳ ಕಾರ್ಯಾರಂಭದ ಗುರಿಗಳನ್ನು ನಿಗದಿಪಡಿಸಿದ ನಂತರ, ಭೂಸ್ವಾಧೀನ ಪ್ರಕ್ರಿಯೆಯು ಮತ್ತಷ್ಟು ವೇಗ ಪಡೆದುಕೊಂಡಿದೆ. ಕಾರಿಡಾರ್–2ರ ಎರಡು ಪ್ಯಾಕೇಜ್‌ಗಳು ಹಾಗೂ ನಾಲ್ಕು ಸ್ಟೇಷನ್ ಪ್ಯಾಕೇಜ್‌ಗಳ ಅಡಿಯಲ್ಲಿ ಒಟ್ಟು 30 ನಿಲ್ದಾಣಗಳ ಕಾಮಗಾರಿಗಳಿಗೆ ಗುತ್ತಿಗೆ ನೀಡಲಾಗಿದೆ ಮತ್ತು ಸ್ಥಳದಲ್ಲಿನ ಕಾಮಗಾರಿಗಳು ಪ್ರಗತಿಯಲ್ಲಿವೆ. ನಿಲ್ದಾಣ ನಿರ್ಮಾಣ ಕಾಮಗಾರಿಗಳಲ್ಲಿಯೂ ಗಮನಾರ್ಹ ಪ್ರಗತಿ ಸಾಧಿಸಲಾಗುತ್ತಿದೆ.

ನಮ್ಮ ಉದ್ಯೋಗಿಗಳು ಈ ಪಯಣದ ಅವಿಭಾಜ್ಯ ಅಂಗವಾಗಿದ್ದಾರೆ. ಅವರ ಕ್ರೀಡಾ ಮನೋಭಾವವನ್ನು ಉತ್ತೇಜಿಸುವುದು ಹಾಗೂ ತಂಡದ ಮನೋಭಾವವನ್ನು ಬೆಳೆಸುವ ಉದ್ದೇಶದಿಂದ ಬಿ–ರೈಡ್ ಕ್ರೀಡಾಕೂಟ–2026 ಅನ್ನು ಆಯೋಜಿಸಲಾಯಿತು. ವಿವಿಧ ಒಳಾಂಗಣ ಮತ್ತು ಹೊರಾಂಗಣ ಕ್ರೀಡೆಗಳಲ್ಲಿ ಉದ್ಯೋಗಿಗಳು ಉತ್ಸಾಹದಿಂದ ಭಾಗವಹಿಸಲು ಈ ಕಾರ್ಯಕ್ರಮ ಉತ್ತಮ ಅವಕಾಶವನ್ನು ಒದಗಿಸಿತು. ಈ ಕ್ರೀಡಾಕೂಟವು ತಂಡದ ಸಹಕಾರ, ಉದ್ಯೋಗಿಗಳ ಕಲ್ಯಾಣ, ದೈಹಿಕ ಆರೋಗ್ಯ ಮತ್ತು ಆರೋಗ್ಯಕರ ಕಾರ್ಯಪರಿಸರದ ಮೇಲಿನ ನಮ್ಮ ಬದ್ಧತೆಯನ್ನು ಮತ್ತಷ್ಟು ಬಲಪಡಿಸಿತು.

ಆಗಸ್ಟ್ ತಿಂಗಳಲ್ಲಿ ಯಶವಂತಪುರ ಕಾರಿಡಾರ್–2 ಸೈಟ್ ಕಚೇರಿಯಲ್ಲಿ 80ನೇ ಸ್ವಾತಂತ್ರ್ಯೋತ್ಸವವನ್ನು ಆಚರಿಸಲಾಯಿತು. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ತ್ಯಾಗ ಮಾಡಿದ ಮಹನೀಯರಿಗೆ ಗೌರವ ಸಲ್ಲಿಸುವ ಮೂಲಕ ಸಮಗ್ರತೆ ಮತ್ತು ದೇಶಭಕ್ತಿಯ ಮನೋಭಾವವನ್ನು ಆಚರಿಸಲಾಯಿತು. ಇದೇ ಸಂದರ್ಭದಲ್ಲಿ ಕ್ರೀಡಾಕೂಟದಲ್ಲಿ ವಿಜೇತರಾದವರಿಗೆ ಪ್ರಶಸ್ತಿಗಳನ್ನು ವಿತರಿಸಿ, ಅವರ ಉತ್ಸಾಹ, ಭಾಗವಹಿಸುವಿಕೆ ಮತ್ತು ಕ್ರೀಡಾ ಸಾಧನೆಗಳನ್ನು ಗುರುತಿಸಲಾಯಿತು.

ರೋಲಿಂಗ್ ಸ್ಟಾಕ್ ಖರೀದಿ ಕ್ಷೇತ್ರದಲ್ಲಿ ಮತ್ತೊಂದು ಮಹತ್ವದ ಮೈಲಿಗಲ್ಲನ್ನು ಸೆಪ್ಟೆಂಬರ್ 1, 2026ರಂದು ಸಾಧಿಸಲಾಯಿತು. ಕ–ರೈಡ್/ಬಿ–ರೈಡ್ ಮತ್ತು ಚೆನ್ನೈನ ಇಂಟಿಗ್ರಲ್ ಕೋಚ್ ಫ್ಯಾಕ್ಟರಿ (ICF) ನಡುವೆ 51 ಮೂರು–ಕೋಚ್ ರೈಲು ಸೆಟ್‌ಗಳ ತಯಾರಿಕೆ ಮತ್ತು ಪೂರೈಕೆಗಾಗಿ ಒಪ್ಪಂದ ಪತ್ರ (MoU)ಕ್ಕೆ ಸಹಿ ಮಾಡಲಾಯಿತು. ಇದರ ಅಂದಾಜು ಮೌಲ್ಯ ₹1,565 ಕೋಟಿಯಾಗಿದೆ.

ಆಗಸ್ಟ್ 25, 2026ರಂದು ನವದೆಹಲಿಯಲ್ಲಿ ನಡೆದ "Future-Ready Railways: Driving Growth, Sustainability & Innovation" ಸಮಾವೇಶದಲ್ಲಿ ಪ್ಯಾನಲಿಸ್ಟ್ ಆಗಿ ಭಾಗವಹಿಸುವ ಅವಕಾಶ ದೊರೆಯಿತು. ಈ ಸಮಾವೇಶವು ನವೀನ ಹಣಕಾಸು ಮಾದರಿಗಳು ಹಾಗೂ ಉಪನಗರ ಮತ್ತು ಪ್ರಾದೇಶಿಕ ರೈಲು ವ್ಯವಸ್ಥೆಗಳಲ್ಲಿ ಖಾಸಗಿ ವಲಯದ ಭಾಗವಹಿಸುವಿಕೆಯನ್ನು ಹೆಚ್ಚಿಸುವ ಕುರಿತು ವಿಚಾರ ವಿನಿಮಯ ಮತ್ತು ನೆಟ್‌ವರ್ಕಿಂಗ್‌ಗೆ ಉತ್ತಮ ವೇದಿಕೆಯನ್ನು ಒದಗಿಸಿತು. ವಿಶೇಷವಾಗಿ ನಿಲ್ದಾಣಗಳ ಅಭಿವೃದ್ಧಿ, ಭೂಮೌಲ್ಯ ಆಧಾರಿತ ಹಣಕಾಸು (Land-Value Capture) ಮತ್ತು ಸಾರಿಗೆ ಆಧಾರಿತ ನಗರಾಭಿವೃದ್ಧಿ (TOD) ಕುರಿತಾಗಿ ಮಹತ್ವದ ವಿಚಾರಗಳನ್ನು ಹಂಚಿಕೊಳ್ಳಲಾಯಿತು.

ಇದುವರೆಗೆ ಸಾಧಿಸಿರುವ ಪ್ರಗತಿಯು ನಮಗೆ ಆತ್ಮವಿಶ್ವಾಸವನ್ನು ನೀಡುವುದರ ಜೊತೆಗೆ ಇನ್ನಷ್ಟು ವೇಗದೊಂದಿಗೆ ಮುನ್ನಡೆಯುವ ನಮ್ಮ ಸಂಕಲ್ಪವನ್ನು ಬಲಪಡಿಸಿದೆ. ಅದೇ ಸಮಯದಲ್ಲಿ, ಇನ್ನೂ ಸಾಕಷ್ಟು ಕಾರ್ಯಗಳನ್ನು ಪೂರ್ಣಗೊಳಿಸಬೇಕಾಗಿದೆ. ನಿರ್ಮಾಣ ಕಾಮಗಾರಿಗಳಿಗೆ ವೇಗ ನೀಡುವುದು, ಭೂಸ್ವಾಧೀನ ಪ್ರಕ್ರಿಯೆಯನ್ನು ತ್ವರಿತಗೊಳಿಸುವುದು, ಪ್ರಮುಖ ಟೆಂಡರ್ ಚಟುವಟಿಕೆಗಳನ್ನು ಮುಂದುವರಿಸುವುದು, ಯೋಜನೆಯ ಮೇಲ್ವಿಚಾರಣೆಯನ್ನು ಮತ್ತಷ್ಟು ಬಲಪಡಿಸುವುದು ಹಾಗೂ ನಿಧಿಗಳ ಪರಿಣಾಮಕಾರಿ ಬಳಕೆಯನ್ನು ಖಚಿತಪಡಿಸುವುದು ನಮ್ಮ ಪ್ರಮುಖ ಆದ್ಯತೆಗಳಾಗಿವೆ.

ನಿರಂತರ ಬದ್ಧತೆ, ಸಮನ್ವಯ ಮತ್ತು ಸಾಮೂಹಿಕ ಪ್ರಯತ್ನಗಳೊಂದಿಗೆ, ಇದುವರೆಗೆ ಸಾಧಿಸಿರುವ ವೇಗವನ್ನು ಸ್ಪಷ್ಟವಾದ ಪ್ರಗತಿಯಾಗಿ ಪರಿವರ್ತಿಸಿ, ಯೋಜನೆಯನ್ನು ಸಮಯೋಚಿತವಾಗಿ ಪೂರ್ಣಗೊಳಿಸುವಲ್ಲಿ ನಾವು ಯಶಸ್ವಿಯಾಗುತ್ತೇವೆ ಎಂಬ ವಿಶ್ವಾಸವಿದೆ. ಬೆಂಗಳೂರಿಗಾಗಿ ಆಧುನಿಕ, ಸುರಕ್ಷಿತ, ಪರಿಣಾಮಕಾರಿ ಮತ್ತು ಸುಸ್ಥಿರ ಉಪನಗರ ರೈಲು ಜಾಲವನ್ನು ನಿರ್ಮಿಸುವ ನಮ್ಮ ದೃಷ್ಟಿಕೋನವನ್ನು ಸಾಕಾರಗೊಳಿಸುವತ್ತ ನಾವು ಮತ್ತಷ್ಟು ಸಮೀಪಿಸುತ್ತಿದ್ದೇವೆ.

## ಬಿ.ಎಸ್.ಟಿ.ಪಿ. ಫ್ರೈಮ್

### ಜಪಾನ್‌ನ ನಗರಾಭಿವೃದ್ಧಿ, ಕಟ್ಟಡ ಮತ್ತು ವಸತಿ ಕೈಗಾರಿಕೆಗಳ ಸಂಸ್ಥೆ ಜಪಾನ್ ಅಂತರರಾಷ್ಟ್ರೀಯ ಸಂಘಟನೆ (JUBH) ಕ–ರೈಡ್‌ಗೆ ಭೇಟಿ

JUBH ಜಪಾನ್ ನಿಯೋಗವು ಆಗಸ್ಟ್ 21 , 2026ರಂದು ಬಿಎಸ್‌ಟಿಪಿ ಕುರಿತು ಮಾಹಿತಿ ಪಡೆಯಲು ಹಾಗೂ ನಗರ ರೈಲು ಮತ್ತು ಮೂಲಸೌಕರ್ಯ ಅಭಿವೃದ್ಧಿ ಕ್ಷೇತ್ರದಲ್ಲಿ ಭಾರತ–ಜಪಾನ್ ಸಹಕಾರದ ಅವಕಾಶಗಳನ್ನು ಅನ್ವೇಷಿಸಲು ಕ–ರೈಡ್ ಗೆ ಭೇಟಿ ನೀಡಿತು.

JUBHನ ಪ್ರಧಾನ ಕಾರ್ಯದರ್ಶಿ ಶ್ರೀ ಹಿರೋಯುಕಿ ವಕಬಯಾಶಿ ಅವರ ನೇತೃತ್ವದಲ್ಲಿ ಆಗಮಿಸಿದ ನಿಯೋಗದೊಂದಿಗೆ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಲಕ್ಷ್ಮಣ್ ಸಿಂಗ್ ಅವರು ಬಿಎಸ್‌ಟಿಪಿಗೆ ಸಂಬಂಧಿಸಿದ ಪ್ರಮುಖ ಅಂಶಗಳ ಕುರಿತು ಚರ್ಚೆ ನಡೆಸಿದರು. ಟೆಂಡರ್ ಪ್ರಕ್ರಿಯೆ, ನವೀನ ವಿನ್ಯಾಸ, ಬಹುಮಾದರಿ ಸಾರಿಗೆ ಏಕೀಕರಣ, ಯೋಜನೆ ಅನುಷ್ಠಾನ, ರೈಲು ಬೋಗಿಗಳು ಹಾಗೂ ಬೆಂಗಳೂರಿಗೆ ಯೋಜನೆಯಿಂದ ನಿರೀಕ್ಷಿಸಲಾದ ಪ್ರಯೋಜನಗಳು ಸೇರಿದಂತೆ ವಿವಿಧ ವಿಷಯಗಳ ಕುರಿತು ಚರ್ಚಿಸಲಾಯಿತು. ಯೋಜನೆಯ ಇತ್ತೀಚಿನ ಪ್ರಗತಿ ಮತ್ತು ಅನುಷ್ಠಾನದ ಕುರಿತೂ ಚರ್ಚೆ ನಡೆಯಿತು.

ಈ ಸಂವಾದವು ದೊಡ್ಡ ಪ್ರಮಾಣದ ನಗರ ರೈಲು ಮೂಲಸೌಕರ್ಯ ಹಾಗೂ ಸಮಗ್ರ ಮತ್ತು ಸುಸ್ಥಿರ ಸಾರಿಗೆ ವ್ಯವಸ್ಥೆಗಳ ಕುರಿತು ಜ್ಞಾನ ಹಂಚಿಕೆ ಮತ್ತು ವಿವಿಧ ದೃಷ್ಟಿಕೋನಗಳ ವಿನಿಮಯಕ್ಕೆ ಉತ್ತಮ ಅವಕಾಶವನ್ನು ಒದಗಿಸಿತು.

ವಸತಿ, ವಾಸ್ತುಶಿಲ್ಪ, ನಗರಾಭಿವೃದ್ಧಿ ಮತ್ತು ನಗರ ಸಾರಿಗೆ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಭಾರತೀಯ ಸಂಸ್ಥೆಗಳೊಂದಿಗೆ JUBH ನಿಯೋಗವು ನಡೆಸುತ್ತಿರುವ ವ್ಯಾಪಕ ಸಂವಾದದ ಭಾಗವಾಗಿ ಈ ಭೇಟಿ ನಡೆಯಿತು. ಜಪಾನ್ ಮತ್ತು ಭಾರತದ ನಡುವೆ ಭವಿಷ್ಯದಲ್ಲಿ ಸಹಕಾರದ ಸಾಧ್ಯತೆಗಳನ್ನು ಅನ್ವೇಷಿಸುವುದು ಈ ಸಂವಾದದ ಪ್ರಮುಖ ಉದ್ದೇಶವಾಗಿತ್ತು.

ಈ ಸಂದರ್ಭದಲ್ಲಿ ಶ್ರೀ ರಾಜೇಶ್ ಕುಮಾರ್ ಸಿಂಗ್, ನಿರ್ದೇಶಕರು (ಪ್ರಾಜೆಕ್ಟ್ ಮತ್ತು ಪ್ಲಾನಿಂಗ್) , ಶ್ರೀ ಪ್ರಸನ್ನ ಕುಮಾರ್ ಕ್ಷತ್ರಿಯ, ಸಲಹೆಗಾರರು (ಒಪ್ಪಂದಗಳು) ಹಾಗೂ ಕ–ರೈಡ್‌ನ ಇತರ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.









### ಎನ್‌ಹೆಚ್44ರಲ್ಲಿ ಪ್ರಮುಖ ಸೇತುವೆ (RUB) ಸಂಖ್ಯೆ 470ರ ತಾತ್ಕಾಲಿಕ ಬೀಮ್ ಅಳವಡಿಕೆ ಕಾಮಗಾರಿ ಪೂರ್ಣಗೊಂಡಿದೆ

ಬಯ್ಯಪ್ಪನಹಳ್ಳಿ–ಹೊಸೂರು (BYPL–HSRA) 48 ಕಿ.ಮೀ. ಉದ್ದದ ರೈಲು ದ್ವಿಪಥೀಕರಣ ಮಾರ್ಗ ಯೋಜನೆಯು ಸೆಪ್ಟೆಂಬರ್ 4, 2026ರಂದು ಮತ್ತೊಂದು ಪ್ರಮುಖ ಮೈಲಿಗಲ್ಲನ್ನು ಸಾಧಿಸಿದೆ. ಚಂದಾಪುರದ ಸಮೀಪ NH-44 (ಹೊಸೂರು ಹೆದ್ದಾರಿ)ಯಲ್ಲಿ ನಿರ್ಮಾಣವಾಗುತ್ತಿರುವ ಪ್ರಮುಖ ಸೇತುವೆ (RUB) ಸಂಖ್ಯೆ 470ರ ತಾತ್ಕಾಲಿಕ ISMB 600 ಬೀಮ್‌ಗಳನ್ನು ಯಶಸ್ವಿಯಾಗಿ ಅಳವಡಿಸಲಾಯಿತು.

ಸಂಚಾರ ಪೊಲೀಸರ ಸಮನ್ವಯದೊಂದಿಗೆ ರಾತ್ರಿ ವೇಳೆಯಲ್ಲಿ ರಸ್ತೆ ಸಂಚಾರವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿ, ಅಗತ್ಯವಿರುವ ಎಲ್ಲಾ ಸುರಕ್ಷತಾ ಕ್ರಮಗಳನ್ನು ಕೈಗೊಂಡು ಈ ಕಾಮಗಾರಿಯನ್ನು ಪೂರ್ಣಗೊಳಿಸಲಾಯಿತು.

ಪ್ರಸ್ತಾವಿತ 61 ಮೀಟರ್ ಅಗಲದ ಓಪನ್ ವೆಬ್ ಗರ್ಡರ್ (OWG) ಸೇತುವೆಯು ವಾಹನಗಳಿಗೆ ಹೆಚ್ಚಿನ ಅಗಲ ಮತ್ತು ಸುರಕ್ಷಿತ ರಸ್ತೆ ಮಾರ್ಗವನ್ನು ಒದಗಿಸಲಿದೆ. ಇದರಿಂದ ಸಂಚಾರ ದಟ್ಟಣೆ ಕಡಿಮೆಯಾಗುವುದರ ಜೊತೆಗೆ, ವಾಹನ ಸಂಚಾರದ ಸುಗಮತೆ ಹೆಚ್ಚಿ ರಸ್ತೆ ಸುರಕ್ಷತೆ ಮತ್ತಷ್ಟು ಸುಧಾರಿಸಲಿದೆ.

ತಾತ್ಕಾಲಿಕ ಬೀಮ್‌ಗಳ ಯಶಸ್ವಿ ಅಳವಡಿಕೆಯು ಪ್ರಗತಿಯಲ್ಲಿರುವ BYPL–HSRA ದ್ವಿಪಥ ಮಾರ್ಗ ಯೋಜನೆಯ ಮತ್ತೊಂದು ಮಹತ್ವದ ಮೈಲಿಗಲ್ಲಾಗಿದೆ.





# ಸುದ್ದಿ – ನೋಟ

## ಜಿಬಿಎಯ "ತ್ಯಾಜ್ಯಮುಕ್ತ" ಅಭಿಯಾನಕ್ಕೆ ಬಿ–ರೈಡ್ ಬೆಂಬಲ

"ತ್ಯಾಜ್ಯಮುಕ್ತ" ಅಭಿಯಾನವನ್ನು 2026ರ ಆಗಸ್ಟ್ 1ರಂದು ಬೆಂಗಳೂರಿನ ಹೆಬ್ಬಾಳ ಜಂಕ್ಷನ್‌ನಲ್ಲಿ ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಡಿ. ಕೆ. ಶಿವಕುಮಾರ್ ಹಾಗೂ ಬೆಂಗಳೂರು ಅಭಿವೃದ್ಧಿ ಸಚಿವರಾದ ಶ್ರೀ ಕೃಷ್ಣ ಬೈರೇಗೌಡ ರವರ ಸಮ್ಮುಖದಲ್ಲಿ ಅಧಿಕೃತವಾಗಿ ಪ್ರಾರಂಭಿಸಲಾಯಿತು.

ಗ್ರೇಟರ್ ಬೆಂಗಳೂರು ಪ್ರಾಧಿಕಾರ (GBA)ದ ನೇತೃತ್ವದಲ್ಲಿ, ಐದು ನಗರ ಪಾಲಿಕೆಗಳು, ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಲಿಮಿಟೆಡ್ (BSWML) ಹಾಗೂ ಇತರ ಸಂಬಂಧಿತ ಇಲಾಖೆಗಳ ಸಹಯೋಗದೊಂದಿಗೆ ಈ ಅಭಿಯಾನವನ್ನು ಕೈಗೊಳ್ಳಲಾಗಿದೆ. ಬೆಂಗಳೂರಿನಲ್ಲಿರುವ ಹಳೆಯ ತ್ಯಾಜ್ಯವನ್ನು ತೆರವುಗೊಳಿಸುವುದು, ಅನಧಿಕೃತವಾಗಿ ತ್ಯಾಜ್ಯ ಸುರಿಯುವುದನ್ನು ತಡೆಗಟ್ಟುವುದು ಹಾಗೂ ನಗರದ ಸ್ವಚ್ಛತೆ ಮತ್ತು ಸೌಂದರ್ಯವನ್ನು ಸುಧಾರಿಸುವುದು ಅಭಿಯಾನದ ಪ್ರಮುಖ ಉದ್ದೇಶಗಳಾಗಿವೆ.

ಅಭಿಯಾನದ ಉದ್ಘಾಟನೆಯ ನಂತರ, ಜಿಬಿಎಯ ಮುಖ್ಯ ಆಯುಕ್ತರು ಎಸ್ಟೀಮ್ ಮಾಲ್‌ನಿಂದ ಕೆ.ಆರ್. ಪುರಂವರೆಗೆ ಹೊರ ವರ್ತುಲ ರಸ್ತೆ ಮಾರ್ಗವನ್ನು ಪರಿಶೀಲಿಸಿದರು. ಈ ಸಂದರ್ಭದಲ್ಲಿ ಹಳೆಯ ತ್ಯಾಜ್ಯ, ನಿರ್ಮಾಣ ಮತ್ತು ಡೆಮಾಲಿಷನ್ (C&D) ತ್ಯಾಜ್ಯ, ಉತ್ಖನನದಿಂದ ಹೊರಬಂದ ಮಣ್ಣು ಹಾಗೂ ಅನಧಿಕೃತವಾಗಿ ತ್ಯಾಜ್ಯ ಸುರಿಯಲಾಗಿರುವ ಸ್ಥಳಗಳನ್ನು ಗುರುತಿಸಲಾಯಿತು. ತ್ಯಾಜ್ಯವನ್ನು ತಕ್ಷಣ ತೆರವುಗೊಳಿಸುವುದು, ಸ್ಥಳಗಳನ್ನು ಪುನರ್‌ಸ್ಥಾಪಿಸುವುದು ಹಾಗೂ ನಿಯಮಿತವಾಗಿ ಮೇಲ್ವಿಚಾರಣೆ ನಡೆಸುವಂತೆ ನಿರ್ದೇಶನ ನೀಡಲಾಯಿತು.

ಈ ಅಭಿಯಾನಕ್ಕೆ ಬೆಂಬಲವಾಗಿ, ಬಿ–ರೈಡ್ ತನ್ನ ಯೋಜನಾ ಮಾರ್ಗಗಳನ್ನು ಸ್ವಚ್ಛವಾಗಿಡಲು, ತನ್ನ ವ್ಯಾಪ್ತಿಯೊಳಗಿನ ತ್ಯಾಜ್ಯವನ್ನು ಸಮಯಕ್ಕೆ ಸರಿಯಾಗಿ ತೆರವುಗೊಳಿಸಲು ಹಾಗೂ ಜವಾಬ್ದಾರಿಯುತ ಮತ್ತು ಸುಸ್ಥಿರ ತ್ಯಾಜ್ಯ ನಿರ್ವಹಣಾ ಪದ್ಧತಿಗಳನ್ನು ಉತ್ತೇಜಿಸಲು ತನ್ನ ಬದ್ಧತೆಯನ್ನು ಪುನರುಚ್ಚರಿಸಿದೆ. ಇದರ ಮೂಲಕ ಸ್ವಚ್ಛ ಮತ್ತು ಹೆಚ್ಚು ಸುಸ್ಥಿರ ಬೆಂಗಳೂರಿನ ನಿರ್ಮಾಣಕ್ಕೆ ಕೊಡುಗೆ ನೀಡಲು ಬಿ–ರೈಡ್ ಮುಂದಾಗಿದೆ.





## "ಇನ್ಫ್ರಾಸ್ಟ್ರಕ್ಚರ್ ಟುಡೇ ಕಾನ್ಕ್ಲೇವ್" – ನವದೆಹಲಿಯಲ್ಲಿ ಭವಿಷ್ಯಕ್ಕೆ ಸನ್ನದ್ಧವಾಗುತ್ತಿರುವ ರೈಲ್ವೆ ವ್ಯವಸ್ಥೆಯ ಕುರಿತು ವ್ಯವಸ್ಥಾಪಕ ನಿರ್ದೇಶಕರ ಭಾಷಣ

ಬಿ–ರೈಡ್‌ನ ವ್ಯವಸ್ಥಾಪಕ ನಿರ್ದೇಶಕರಾಧ ಶ್ರೀ ಲಕ್ಷ್ಮಣ್ ಸಿಂಗ್, ಆಗಸ್ಟ್ 25, 2026 ರಂದು ಭಾರತ ಸರ್ಕಾರದ ರೈಲ್ವೆ ಸಚಿವಾಲಯದ ಬೆಂಬಲದೊಂದಿಗೆ, ಇನ್ಫ್ರಾಸ್ಟ್ರಕ್ಚರ್ ಟುಡೇ ಮತ್ತು ಕನ್‌ಸ್ಟ್ರಕ್ಷನ್ ವರ್ಲ್ಡ್ ಸಹಯೋಗದೊಂದಿಗೆ ಫಸ್ಟ್ ಕನ್‌ಸ್ಟ್ರಕ್ಚರ್ ಕೌನ್ಸಿಲ್ ಆಯೋಜಿಸಿದ್ದ ಇನ್ಫ್ರಾಸ್ಟ್ರಕ್ಚರ್ ಟುಡೇ ಕಾನ್ಕ್ಲೇವ್ – ರೈಲ್ವೇಸ್‌ನಲ್ಲಿ ಪ್ಯಾನೆಲಿಸ್ಟ್ ಆಗಿ ಭಾಗವಹಿಸಿದ್ದರು.

"ಭಾರತದ ರೈಲು ವಿಸ್ತರಣೆಗೆ ಯಾರು ಹಣಕಾಸು ಒದಗಿಸುತ್ತಾರೆ?" ಎಂಬ ವಿಷಯದ ಕುರಿತು ಮಾತನಾಡಿದ ಶ್ರೀ ಲಕ್ಷ್ಮಣ್ ಸಿಂಗ್, ಭಾರತದ ಬೆಳೆಯುತ್ತಿರುವ ರೈಲು ಮೂಲಸೌಕರ್ಯ ಅಗತ್ಯತೆಗಳನ್ನು ಪೂರೈಸಲು ನವೀನ ಮತ್ತು ವೈವಿಧ್ಯಮಯ ಹಣಕಾಸು ಮಾದರಿಗಳು, ಹೆಚ್ಚಿನ ಖಾಸಗಿ ವಲಯದ ಭಾಗವಹಿಸುವಿಕೆ ಮತ್ತು ಪಿಪಿಪಿ, ಇಪಿಸಿ, ಸಾರಿಗೆ–ಆಧಾರಿತ ಅಭಿವೃದ್ಧಿ (ಟಿಒಡಿ) ಮತ್ತು ಭೂ–ಮೌಲ್ಯಮಾಪನ ಕಾರ್ಯವಿಧಾನಗಳನ್ನು ವ್ಯಾಪಕವಾಗಿ ಅಳವಡಿಸಿಕೊಳ್ಳುವ ಪ್ರಾಮುಖ್ಯತೆಯನ್ನು ವಿವರಿಸಿದರು.

ಬಿಎಸ್‌ಟಿಪಿಯು ಕೇಂದ್ರ–ರಾಜ್ಯ ಸಹಯೋಗದ ಉತ್ತಮ ಸಂಸ್ಥೆಯಾಗಿದೆ, ಇದು ಬೆಳೆಯುತ್ತಿರುವ ಇತರೆ ನಗರಗಳಲ್ಲಿ ಉಪನಗರ ರೈಲು ವ್ಯವಸ್ಥೆಗಳ ಅಭಿವೃದ್ಧಿಗೆ ಅಮೂಲ್ಯವಾದ ಒಳನೋಟಗಳನ್ನು ನೀಡುತ್ತದೆ ಎಂದು ವಿವರಿಸಿದರು. ರೈಲ್ವೆ ಯೋಜನೆಗಳನ್ನು ಕೇವಲ ಸಾರಿಗೆ ಮೂಲಸೌಕರ್ಯವಾಗಿ ನೋಡದೆ, ಸಮಗ್ರ ನಗರ ಮತ್ತು ಆರ್ಥಿಕ ಅಭಿವೃದ್ಧಿಗೆ ವೇಗವರ್ಧಕಗಳಾಗಿ ನೋಡಬೇಕು, ಸುಸ್ಥಿರ, ಸಂಪರ್ಕಿತ ಮತ್ತು ಭವಿಷ್ಯಕ್ಕೆ ಸಿದ್ಧವಾದ ಸಾರಿಗೆ ವ್ಯವಸ್ಥೆಯನ್ನು ಸಕ್ರಿಯಗೊಳಿಸಬೇಕು ಎಂದು ಅವರು ಒತ್ತಿ ಹೇಳಿದರು.








# ಭೇಟಿ ಮತ್ತು ಪರಿಶೀಲನೆಗಳು

## ಕಾರಿಡಾರ್ 4ಎ





2026ರ ಆಗಸ್ಟ್ 9ರಂದು ವ್ಯವಸ್ಥಾಪಕ ನಿರ್ದೇಶಕರು ಹೀಲಲಿಗೆದಿಂದ ಬೆನ್ನಿಗಾನಹಳ್ಳಿ ಬಿಎಸ್‌ಟಿಪಿ ನಿಲ್ದಾಣದವರೆಗೆ ಸಾಗುವ ಕಾರಿಡಾರ್-4ಎ, ಪ್ಯಾಕೇಜ್-ಎ ನಲ್ಲಿ ನಡೆಯುತ್ತಿರುವ ಕಾಮಗಾರಿಗಳನ್ನು ಪರಿಶೀಲಿಸಿದರು.

ಪರಿಶೀಲನೆಯ ಸಂದರ್ಭದಲ್ಲಿ ನಿಲ್ದಾಣಗಳ ನಿರ್ಮಾಣ ಪ್ರಗತಿ, ಗುಣಮಟ್ಟ ಮತ್ತು ಸುರಕ್ಷತಾ ಮಾನದಂಡಗಳ ಪಾಲನೆ, ಮಾನವ ಸಂಪನ್ಮೂಲ ಹಾಗೂ ಅಗತ್ಯ ಸಂಪನ್ಮೂಲಗಳ ನಿಯೋಜನೆ, ಮತ್ತು ಸಿ4ಎ ನಿಲ್ದಾಣಗಳಲ್ಲಿ FOB ಹಾಗೂ ಪ್ರವೇಶ / ನಿರ್ಗಮನ ವಿನ್ಯಾಸಗಳ ಕಾರ್ಯವನ್ನು ತ್ವರಿತಗೊಳಿಸುವ ಕುರಿತು ಪರಿಶೀಲಿಸಲಾಯಿತು.ಕಗ್ಗದಾಸಪುರದಲ್ಲಿ LC 136 ತೆರವು, ಭೂಸ್ವಾಧೀನ ಹಾಗೂ ಮಾರತಹಳ್ಳಿ ಮತ್ತು ದೊಡ್ಡನೆಕುಂದಿಯಲ್ಲಿ ವಿದ್ಯುತ್ ಮಾರ್ಗ ಸ್ಥಳಾಂತರ ಸೇರಿದಂತೆ ಪ್ರಮುಖ ಸಮಸ್ಯೆಗಳ ಕುರಿತು ಪರಿಶೀಲನೆ ನಡೆಸಲಾಯಿತು. ಬಾಕಿ ಇರುವ ಪ್ರಮುಖ ಸಮಸ್ಯೆಗಳನ್ನು ತ್ವರಿತವಾಗಿ ಪರಿಹರಿಸಿ ಕಾಮಗಾರಿಗಳನ್ನು ವೇಗಗೊಳಿಸುವಂತೆ ಗುತ್ತಿಗೆದಾರರಿಗೆ ನಿರ್ದೇಶನ ನೀಡಲಾಯಿತು. ಈ ಪರಿಶೀಲನೆಯಲ್ಲಿ Bi-RIDE, GC ಹಾಗೂ RPPL-RVNL ಸಂಸ್ಥೆಗಳ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

## ದ್ವಿಪಥೀಕರಣ ಯೋಜನೆ





2026ರ ಆಗಸ್ಟ್ 24ರಂದು ಬಿ-ರೈಡ್‌ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಲಕ್ಷ್ಮಣ್ ಸಿಂಗ್ ಅವರು ಜಿಬಿಎಯ ಮುಖ್ಯ ಆಯುಕ್ತರಾದ ಶ್ರೀ ಮಹೇಶ್ವರ ರಾವ್ ಹಾಗೂ ಬೆಂಗಳೂರು ನಗರ ಜಿಲ್ಲೆಯ ಉಪ ಆಯುಕ್ತರು ಮತ್ತು ಜಿಲ್ಲಾ ದಂಡಾಧಿಕಾರಿಗಳಾದ ಶ್ರೀ ಜಿ.ಎಸ್. ಕಂಠರಾಜು ಅವರೊಂದಿಗೆ ಹೆಬ್ಬಾಳ – ಯಶವಂತಪುರ ವಿಭಾಗದ ದ್ವಿಪಥೀಕರಣ ಯೋಜನೆಯಡಿ ಪ್ರಸ್ತಾವಿತ LC No. 150 (ನಾಗಶೆಟ್ಟಿಹಳ್ಳಿ ಗೇಟ್) ತೆರವು ಕಾಮಗಾರಿಗಳನ್ನು ಪರಿಶೀಲಿಸಿದರು. ಪರಿಶೀಲನೆಯ ಸಂದರ್ಭದಲ್ಲಿ LC No. 150 ತೆರವು, RUB 580A ಮೂಲಕ ಪ್ರಸ್ತಾವಿತ ಪರ್ಯಾಯ ರಸ್ತೆ ಸಂಪರ್ಕ, ರೈಲು ಮಾರ್ಗದ ದ್ವಿಪಥೀಕರಣ ಮತ್ತು ನಿಲ್ದಾಣ ಕಾಮಗಾರಿಗಳು, ಭೂಸ್ವಾಧೀನ ಹಾಗೂ ಹೆಬ್ಬಾಳ ಮೇಲ್ಸೇತುವೆಯ ಕೆಳಭಾಗದಲ್ಲಿರುವ ಅತಿಕ್ರಮಣಗಳ ತೆರವು ಕುರಿತು ಪರಿಶೀಲಿಸಲಾಯಿತು.ತ್ಯಾಜ್ಯವನ್ನು ಅನಧಿಕೃತವಾಗಿ ಸುರಿಯುವುದನ್ನು ತಡೆಗಟ್ಟುವ ಉದ್ದೇಶದಿಂದ LC ಗೇಟ್ ಸಮೀಪ CCTV ಕ್ಯಾಮೆರಾಗಳನ್ನು ಅಳವಡಿಸುವಂತೆ ಮುಖ್ಯ ಆಯುಕ್ತರು ನಿರ್ದೇಶನ ನೀಡಿದರು. ಇದಲ್ಲದೆ, LC No. 150 ಅನ್ನು ಮುಚ್ಚುವ ಕುರಿತು ಸಂಚಾರ ಪ್ರಾಧಿಕಾರಗಳೊಂದಿಗೆ ಸಮನ್ವಯ ಸಾಧಿಸುವಂತೆ ಉಪ ಆಯುಕ್ತರು ಮತ್ತು ಜಿಲ್ಲಾ ದಂಡಾಧಿಕಾರಿಗಳಿಗೆ ನಿರ್ದೇಶನ ನೀಡಲಾಯಿತು.

## ಸೇತುವೆ ಸಂಖ್ಯೆ 420 – ಬೈಯ್ಯಪ್ಪನಹಳ್ಳಿ-ಹೊಸೂರು ರೈಲ್ವೆ ದ್ವಿಪಥೀಕರಣ ಯೋಜನೆಯ ಪರಿಶೀಲನೆ



ಶ್ರೀ ರಾಜೇಶ್ ಕುಮಾರ್ ಸಿಂಗ್, ನಿರ್ದೇಶಕರು (ಪ್ರಾಜೆಕ್ಟ್ ಮತ್ತು ಪ್ಲಾನಿಂಗ್) ರವರು 2026ರ ಆಗಸ್ಟ್ 24ರಂದು ಬೈಯ್ಯಪ್ಪನಹಳ್ಳಿ-ಹೊಸೂರು ರೈಲ್ವೆ ದ್ವಿಪಥೀಕರಣ ಯೋಜನೆಯ ಅತ್ತಿಬೆಲೆ-ರಕ್ಕೋಟ್ ವಿಭಾಗದಲ್ಲಿರುವ ಸೇತುವೆ ಸಂಖ್ಯೆ 420 ಅನ್ನು ಪರಿಶೀಲಿಸಿದರು.

ಪ್ರಿಕಾಸ್ಟ್ ಆರ್‌ಸಿಸಿ ಬಾಕ್ಸ್‌ಗಳನ್ನು ಏರ್-ಪುಶಿಂಗ್ ವಿಧಾನದಲ್ಲಿ ಅಳವಡಿಸಲು ಆರು ದಿನಗಳ ಕಾಲ ತಾತ್ಕಾಲಿಕವಾಗಿ ರಸ್ತೆ ಸಂಚಾರವನ್ನು ಸ್ಥಗಿತಗೊಳಿಸುವ ಪ್ರಸ್ತಾವನೆ ಕುರಿತು ಪರಿಶೀಲನೆ ನಡೆಸಲಾಯಿತು. ಈ ಅವಧಿಯಲ್ಲಿ, ಸಮೀಪದ ಕೈಗಾರಿಕಾ ಪ್ರದೇಶ ಹಾಗೂ TVS ಕಾರ್ಖಾನೆಗೆ ಸಂಚರಿಸುವ ಭಾರಿ ವಾಹನಗಳು ಸೇರಿದಂತೆ ಎಲ್ಲಾ ಸಂಚಾರವನ್ನು LC No. 104 ಮೂಲಕ ಪರ್ಯಾಯ ಮಾರ್ಗಕ್ಕೆ ತಿರುಗಿಸುವ ಯೋಜನೆಯನ್ನು ಪರಿಶೀಲಿಸಲಾಯಿತು. ತಾತ್ಕಾಲಿಕ ರಸ್ತೆ ಸಂಚಾರ ಸ್ಥಗಿತಕ್ಕೆ ತಮಿಳುನಾಡು ರಾಜ್ಯ ಹೆದ್ದಾರಿ ಪ್ರಾಧಿಕಾರಗಳಿಂದ ಅನುಮತಿ ನೀಡಲಾಗಿದೆ.

## ಕಾರಿಡಾರ್ 4



2026ರ ಸೆಪ್ಟೆಂಬರ್ 8ರಂದು ವ್ಯವಸ್ಥಾಪಕ ನಿರ್ದೇಶಕರು ಕಾರಿಡಾರ್-4 ನಿಲ್ದಾಣ ಪ್ಯಾಕೇಜ್-ಬಿ ಕಾಮಗಾರಿಗಳ ಪ್ರಗತಿ, ಚನ್ನಸಂದ್ರ RCC In-situ Box ಕಾಮಗಾರಿಗಳು ಹಾಗ ಬಿಎಮ್‌ಟಿಸಿ, ಬಿಎಮ್‌ಆರ್‌ಸಿಎಲ್ ಮತ್ತು ಭಾರತೀಯ ರೈಲ್ವೆಯೊಂದಿಗೆ ನಿಲ್ದಾಣಗಳ ಬಹುಮಾದರಿ ಸಾರಿಗೆ ಸಂಪರ್ಕ ಕುರಿತು ಪರಿಶೀಲನೆ ನಡೆಸಿದರು. ಕಾಮಗಾರಿಗಳನ್ನು ತ್ವರಿತಗೊಳಿಸಿ, ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವುದರ ಜೊತೆಗೆ ವಿವಿಧ ಸಾರಿಗೆ ವ್ಯವಸ್ಥೆಗಳ ನಡುವೆ ಸುಗಮ ಏಕೀಕರಣ ಮತ್ತು ಸಂಪರ್ಕವನ್ನು ಸಾಧಿಸುವಂತೆ ಅನುಷ್ಠಾನ ಸಂಸ್ಥೆಗಳಿಗೆ ಅಗತ್ಯ ನಿರ್ದೇಶನಗಳನ್ನು ನೀಡಲಾಯಿತು. ಈ ಪರಿಶೀಲನೆಯ ಸಂದರ್ಭದಲ್ಲಿ ಕೆ-ರೈಡ್ ಜನರಲ್ ಕನ್ಸಲ್ಟೆಂಟ್ ಹಾಗೂ M/s. NCC Ltd. ಸಂಸ್ಥೆಗಳ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.


Follow us on

## ವಿಶೇಷ ಕಾರ್ಯಕ್ರಮಗಳು

# ಬಿ–ರೈಡ್ ವತಿಯಿಂದ ಆಗಸ್ಟ್ 15ರಂದು ನಡೆದ 80ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಸ್ವಾತಂತ್ರ್ಯದ ಸ್ಫೂರ್ತಿ ಮತ್ತು ದೇಶಭಕ್ತಿಯ ಉತ್ಸಾಹ













ಬಿ–ರೈಡ್ ವತಿಯಿಂದ ಬೆಂಗಳೂರಿನ ಯಶವಂತಪುರ ಕಾರಿಡಾರ್–2 ಸೈಟ್ ಕಚೇರಿಯಲ್ಲಿ 80ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಲಾಯಿತು. ಈ ಸಂದರ್ಭದಲ್ಲಿ ಬಿ–ರೈಡ್‌ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಲಕ್ಷ್ಮಣ್ ಸಿಂಗ್ ರವರು ಬಿ–ರೈಡ್‌ನ ಅಧಿಕಾರಿಗಳು, ಸಿಬ್ಬಂದಿ, ಗುತ್ತಿಗೆದಾರರು, ಸಲಹೆಗಾರರು ಹಾಗೂ ಯೋಜನೆಯ ಇತರ ಪಾಲುದಾರರ ಸಮ್ಮುಖದಲ್ಲಿ ರಾಷ್ಟ್ರ ಧ್ವಜಾರೋಹಣ ನೆರವೇರಿಸಿದರು.

ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದ ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಮಹಾನಗರ ಪ್ರದೇಶದಾದ್ಯಂತ ಸುಸಜ್ಜಿತ, ಉತ್ತಮ ಸಂಪರ್ಕ ಹೊಂದಿದ ಮತ್ತು ಸುಸ್ಥಿರ ಉಪನಗರ ರೈಲು ಜಾಲವನ್ನು ನಿರ್ಮಿಸುವ ಬೆಂಗಳೂರಿನ ಉಪನಗರ ಸಾರಿಗೆ ಯೋಜನೆಯ ದೃಷ್ಟಿಕೋನವನ್ನು ವಿವರಿಸಿದರು. ವಿವಿಧ ತಂಡಗಳು ಸಾಧಿಸಿರುವ ಪ್ರಗತಿಯನ್ನು ಶ್ಲಾಘಿಸಿದ ಅವರು, ಯೋಜನೆಯ ಅನುಷ್ಠಾನವನ್ನು ಮತ್ತಷ್ಟು ವೇಗಗೊಳಿಸುವಂತೆ ಹಾಗೂ ನಿಗದಿತ ಅವಧಿಯಲ್ಲಿ ಪ್ರಮುಖ ಮೈಲಿಗಲ್ಲುಗಳನ್ನು ಸಾಧಿಸುವತ್ತ ಹೊಸ ಉತ್ಸಾಹದಿಂದ ಗಮನ ಹರಿಸುವಂತೆ ಎಲ್ಲಾ ಪಾಲುದಾರರಿಗೆ ಕರೆ ನೀಡಿದರು.

ವಿಶ್ವದರ್ಜೆಯ ಉಪನಗರ ರೈಲು ಜಾಲವನ್ನು ಅಭಿವೃದ್ಧಿಪಡಿಸುವ ಕ–ರೈಡ್‌ನ ಬದ್ಧತೆಯನ್ನು ಪುನರುಚ್ಚರಿಸಿದ ಅವರು, ಕರ್ನಾಟಕ ಸರ್ಕಾರ, ರೈಲ್ವೆ ಸಚಿವಾಲಯ, ಹಣಕಾಸು ಸಂಸ್ಥೆಗಳು, ಸಲಹೆಗಾರರು, ಗುತ್ತಿಗೆದಾರರು ಹಾಗೂ ಕ–ರೈಡ್ ತಂಡದಿಂದ ನಿರಂತರವಾಗಿ ದೊರೆಯುತ್ತಿರುವ ಸಹಕಾರವನ್ನು ಸ್ಮರಿಸಿ ಕೃತಜ್ಞತೆ ಸಲ್ಲಿಸಿದರು.

ಕಾರ್ಯಕ್ರಮದ ಅಂಗವಾಗಿ ಬಿ–ರೈಡ್ ಕ್ರೀಡಾಕೂಟ–2026 ರಲ್ಲಿ ವಿಜೇತರು ಹಾಗೂ ರನ್ನರ್–ಅಪ್‌ಗಳಿಗೆ ಬಹುಮಾನಗಳನ್ನು ವಿತರಿಸಲಾಯಿತು. ಕ್ರೀಡಾಕೂಟದಲ್ಲಿ ಕ್ರಿಕೆಟ್, ಥ್ರೋಬಾಲ್, ಬ್ಯಾಡ್ಮಿಂಟನ್, ಚೆಸ್, ಕೇರಂ ಹಾಗೂ ಟೇಬಲ್ ಟೆನಿಸ್ ಸ್ಪರ್ಧೆಗಳು ನಡೆದಿದ್ದವು.

ಈ ಸಂದರ್ಭದಲ್ಲಿ ಶ್ರೀ ಆರ್. ಕೆ. ಸಿಂಗ್, ನಿರ್ದೇಶಕರು (ಪ್ರಾಜೆಕ್ಟ್ ಮತ್ತು ಪ್ಲಾನಿಂಗ್) ಸೇರಿದಂತೆ ಬಿ–ರೈಡ್‌ನ ಅಧಿಕಾರಿಗಳು, ಸಿಬ್ಬಂದಿಗಳು, ಗುತ್ತಿಗೆದಾರರು ಹಾಗೂ ಸಲಹೆಗಾರರು ಉಪಸ್ಥಿತರಿದ್ದರು.











# ಬಿ-ರೈಡ್ ಕ್ರೀಡಾಕೂಟ – ದೈಹಿಕ ಕ್ಷಮತೆ, ತಂಡದ ಮನೋಭಾವ ಮತ್ತು ನೌಕರರ ಕ್ಷೇಮಾಭಿವೃದ್ಧಿಗೆ ಉತ್ತೇಜನ





ಬಿ-ರೈಡ್ ಕ್ರೀಡಾಕೂಟ-2026 ಅನ್ನು ಸಂಸ್ಥೆಯ ಅಧಿಕಾರಿಗಳು ಮತ್ತು ಸಿಬ್ಬಂದಿಯ ಉತ್ಸಾಹಭರಿತ ಭಾಗವಹಿಸುವಿಕೆಯೊಂದಿಗೆ ಆಯೋಜಿಸಲಾಯಿತು. ಈ ಕ್ರೀಡಾಕೂಟವು ನೌಕರರ ಕ್ಷೇಮಾಭಿವೃದ್ಧಿ, ದೈಹಿಕ ಕ್ಷಮತೆ, ತಂಡದ ಮನೋಭಾವ, ಕ್ರೀಡಾಸ್ಫೂರ್ತಿ ಹಾಗೂ ಆರೋಗ್ಯಕರ ಕಾರ್ಯಪರಿಸರಕ್ಕೆ ಸಂಸ್ಥೆ ನೀಡುತ್ತಿರುವ ಬದ್ಧತೆಯನ್ನು ಮತ್ತೊಮ್ಮೆ ದೃಢಪಡಿಸಿತು.

ಬಿ-ರೈಡ್‌ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಲಕ್ಷ್ಮಣ್ ಸಿಂಗ್ ಅವರು ಕ್ರೀಡಾಕೂಟವನ್ನು ಉದ್ಘಾಟಿಸಿದರು. ಕ್ರೀಡೆ ಮತ್ತು ದೈಹಿಕ ಚಟುವಟಿಕೆಗಳು ದೈಹಿಕ ಕ್ಷಮತೆ, ಮಾನಸಿಕ ಕ್ಷೇಮ, ತಂಡದ ಸ್ಫೂರ್ತಿ ಹಾಗೂ ಸಮತೋಲನದ ಜೀವನಶೈಲಿಯನ್ನು ಉತ್ತೇಜಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂದು ಅವರು ತಿಳಿಸಿದರು. ಕ್ರೀಡಾ ವಾರದಲ್ಲಿ ಟೇಬಲ್ ಟೆನಿಸ್, ಚೆಸ್, ಕೇರಂ, ಬ್ಯಾಡ್ಮಿಂಟನ್, ಕ್ರಿಕೆಟ್ ಹಾಗೂ ಮಹಿಳೆಯರ ಥ್ರೋಬಾಲ್ ಸೇರಿದಂತೆ ವಿವಿಧ ಒಳಾಂಗಣ ಮತ್ತು ಹೊರಾಂಗಣ ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸಲಾಯಿತು. ಪುರುಷರ ಮತ್ತು ಮಹಿಳೆಯರ ಬ್ಯಾಡ್ಮಿಂಟನ್ ಪಂದ್ಯಾವಳಿಗಳು ಬೆಂಗಳೂರಿನ ಅಕೊಲೆಡ್ಸ್ ಬ್ಯಾಡ್‌ಮಿಂಟನ್ ಮತ್ತು ಸ್ಪೋರ್ಟ್ಸ್ ಅಕಾಡೆಮಿಯಲ್ಲಿ ನಡೆದವು. ಪುರುಷರ ಮತ್ತು ಮಹಿಳೆಯರ ಕ್ರಿಕೆಟ್ ಪಂದ್ಯಾವಳಿಗಳು ಹಾಗೂ ಮಹಿಳೆಯರ ಥ್ರೋಬಾಲ್ ಪಂದ್ಯಾವಳಿಯನ್ನು 2026ರ ಆಗಸ್ಟ್ 6 ಮತ್ತು 7ರಂದು ಬೆಂಗಳೂರಿನ ಎಂ.ಜಿ. ರೈಲ್ವೆ ಕಾಲೋನಿಯಲ್ಲಿ ಆಯೋಜಿಸಲಾಯಿತು. ಪುರುಷರ ಕ್ರಿಕೆಟ್ ಪಂದ್ಯಾವಳಿಯಲ್ಲಿ, ಮಲ್ಲಿಗೆ ಮೇವರಿಕ್ಸ್ ತಂಡವು ವಿಜೇತರಾಗಿ ಹೊರಹೊಮ್ಮಿದರೆ, Doubling Warriors ತಂಡವು ರನ್ನರ್-ಅಪ್ ಸ್ಥಾನ ಗಳಿಸಿತು.





ಮಹಿಳೆಯರ ಕ್ರಿಕೆಟ್ ಪಂದ್ಯಾವಳಿಯಲ್ಲಿ, ಮಲ್ಲಿಗೆ ಕ್ವೀನ್ಸ್ ತಂಡವು ವಿಜೇತರಾದರೆ, ಸಂಪಿಗೆ ಕ್ವೀನ್ಸ್ ತಂಡವು ರನ್ನರ್-ಅಪ್ ಸ್ಥಾನ ಪಡೆದುಕೊಂಡಿತು. ಮಹಿಳೆಯರ ಥ್ರೋಬಾಲ್ ಪಂದ್ಯಾವಳಿಯಲ್ಲಿಯೂ ಉತ್ಸಾಹಭರಿತ ಭಾಗವಹಿಸುವಿಕೆ ಕಂಡುಬಂದಿದ್ದು, ತಂಡಗಳ ನಡುವಿನ ಉತ್ತಮ ಸಮನ್ವಯ, ತಂಡದ ಸ್ಫೂರ್ತಿ ಮತ್ತು ಕ್ರೀಡಾಸ್ಫೂರ್ತಿಯನ್ನು ಪ್ರದರ್ಶಿಸಿತು. ಕ್ರೀಡಾಕೂಟವು ನೌಕರರ ನಡುವಿನ ಸೌಹಾರ್ದವನ್ನು ಬಲಪಡಿಸಲು, ತಂಡದ ಮನೋಭಾವವನ್ನು ಬೆಳೆಸಲು, ಕ್ರೀಡಾಸ್ಫೂರ್ತಿಯನ್ನು ಪ್ರದರ್ಶಿಸಲು ಹಾಗೂ ಆರೋಗ್ಯ ಮತ್ತು ಕ್ಷೇಮಾಭಿವೃದ್ಧಿಯ ಸಂಸ್ಕೃತಿಯನ್ನು ಉತ್ತೇಜಿಸಲು ಉತ್ತಮ ವೇದಿಕೆಯಾಯಿತು. ಕ್ರೀಡಾಕೂಟದ ಯಶಸ್ವಿ ಆಯೋಜನೆಯು ಬಿ-ರೈಡ್ ನೌಕರರ ಉತ್ಸಾಹ, ಸಕ್ರಿಯ ಭಾಗವಹಿಸುವಿಕೆ ಹಾಗೂ ಸಾಮೂಹಿಕ ಸ್ಫೂರ್ತಿಯನ್ನು ಪ್ರತಿಬಿಂಬಿಸಿತು. ಇದರಿಂದ ಸಂಸ್ಥೆಯೊಳಗಿನ ತಂಡದ ಒಗ್ಗಟ್ಟು, ಸೌಹಾರ್ದ ಮತ್ತು ಸಹಭಾಗಿತ್ವದ ಬಾಂಧವ್ಯ ಮತ್ತಷ್ಟು ಬಲಗೊಂಡಿತು.









## ವಿಜೇತರು ಮತ್ತು ರನ್ನರ್-ಅಪ್‌ಗಳು

| ಕ್ರ. ಸಂ. | ಕ್ರೀಡೆ | ವಿಜೇತರು | ರನ್ನರ್-ಅಪ್‌ಗಳು |
|---|---|---|---|
| 1 | ಪುರುಷರ ಕ್ರಿಕೆಟ್ | ಮಲ್ಲಿಗೆ ಮೇವರಿಕ್ಸ್-<br>ತಂಡದ ನಾಯಕ: ರಾಜು ಚಂಬಣ್ಣ ವೈ | ಡಬ್ಲಿಂಗ್ ವಾರಿಯರ್ಸ್ -<br>ತಂಡದ ನಾಯಕ: ಕೆ. ಎಲ್. ಸೇನ್ |
| 2 | ಮಹಿಳೆಯರ ಕ್ರಿಕೆಟ್ | ಮಲ್ಲಿಗೆ ಮೇವರಿಕ್ಸ್-<br>ತಂಡದ ನಾಯಕಿ: ಅರ್ಚನಾ ಕುಲಕರ್ಣಿ | ಸಂಪಿಗೆ ಕ್ವೀನ್ಸ್-<br>ತಂಡದ ನಾಯಕಿ: ಶೀತಲ್ ಎನ್. ಸಿಂಗ್ |
| 3 | ಮಹಿಳೆಯರ ಥ್ರೋಬಾಲ್ | ತಂಡದ ನಾಯಕಿ:<br>ಲಕ್ಷ್ಮಿ ದೇವಾನಂದ / ಹಿರಿಯ ವ್ಯವಸ್ಥಾಪಕಿ | ತಂಡದ ನಾಯಕಿ:<br>ಲಾವಣ್ಯ / ಜನರಲ್ ಕನ್ಸಲ್ಟೆಂಟ್ |
| 4 | ಪುರುಷರ ಬ್ಯಾಡ್ಮಿಂಟನ್ ಡಬಲ್ಸ್ | 1. ಶ್ರೀ ಸುನಿಲ್ ಶರ್ಮಾ, ಎ.ಎಂ., ಪ್ಲಾನಿಂಗ್<br>2. ಶ್ರೀ ಚಿತ್ರಾಂಕ್, ರೈಟ್ಸ್, ಪಿ.ಎಂ.ಸಿ. | 1.ಶ್ರೀ. ಹಿತೇಶ್, ಅರಸ್, ಹಿರಿಯ ಕಾರ್ಯನಿರ್ವಾಹಕ ಸಿವಿಲ್<br>2.ಶ್ರೀ. ಮಹಾದೇವ ಗಾದಗಿ-ತಾಂತ್ರಿಕೇತರ ಸಹಾಯಕ/ ಹಣಕಾಸು |
| 5 | ಮಹಿಳೆಯರ ಬ್ಯಾಡ್ಮಿಂಟನ್ ಡಬಲ್ಸ್ | 1.ಶ್ರೀಮತಿ ವಿಜಯಪ್ರಿಯದರ್ಶಿನಿ, ವ್ಯವಸ್ಥಾಪಕಿ, ವಿನ್ಯಾಸ<br>2.ಶ್ರೀಮತಿ ಎಲ್ಲಂಟಿ ತೇಜಸ್ವಿ, ಸೀನಿಯರ್ ಎಕ್ಸಿಕ್ಯೂಟಿವ್, ಎಸ್&ಟಿ | 1. ಶ್ರೀಮತಿ ಚಂದನ ಆರ್. - ಎಕ್ಸಿಕ್ಯೂಟಿವ್, ಹೆಚ್‌ಆರ್.<br>2. ಶ್ರೀಮತಿ ಲಾಲಿತ್ಯಾ ಕೆ. ಎಸ್. - ಡ್ರಾಯಿಂಗ್ ಸಹಾಯಕರು |
| 6 | ಮಹಿಳೆಯರ ಬ್ಯಾಡ್ಮಿಂಟನ್ ಸಿಂಗಲ್ಸ್ | ಶ್ರೀಮತಿ ದೀಪ್ತಿ. ಎನ್, ತಹಶೀಲ್ದಾರ್/ಭೂಮಿ | ಶ್ರೀಮತಿ ಅನ್ನುಲ್, ಡಿಜಿಎಂ, ಹಣಕಾಸು |
| 7 | ಪುರುಷರ ಕ್ಯಾರಮ್ - ಡಬಲ್ಸ್ | ನವೇಶ್, ಸಹಾಯಕ. ಮ್ಯಾನೇಜರ್/ಎಸ್&ಟಿ<br>ನಿಖಿಲ್ ವಿ ಜೋಲಾಡ್-ಸೀನಿಯರ್ ಮ್ಯಾನೇಜರ್/ಡಬ್ಲಿಂಗ್ | ನೆನವತ್ ಕೃಷ್ಣ ನಾಯಕ್, -ಎಜಿಎಂ/ಎಲೆಕ್ಟ್ರಿಕಲ್<br>ಸತೀಶ್ ಕುಮಾರ್ ಬಿ, ಜನರಲ್ ಕನ್ಸಲ್ಟೆಂಟ್ |
| 8 | ಮಹಿಳೆಯರ ಕ್ಯಾರಮ್ - ಡಬಲ್ಸ್ | ಹಂಸ ಎಲ್. ಪಿ. - ಉಪ ವ್ಯವಸ್ಥಾಪಕರು/ಹಣಕಾಸು<br>ಪ್ರೀತಿ ಬಿ. ಕೆ. - ಎಕ್ಸಿಕ್ಯೂಟಿವ್/ಸೆಮು | ಶಿಲ್ಪಾ ಲತಾ ಬಿ, - ಸಾಮಾನ್ಯ ಸಲಹೆಗಾರ್ತಿ<br>ಶಿಲ್ಪಾ ಕೆ ಎಂ, ಹಿರಿಯ ಕಾರ್ಯನಿರ್ವಾಹಕಿ |
| 9 | ಟೇಬಲ್ ಟೆನ್ನಿಸ್ - ಪುರುಷರು(ಸಿಂಗಲ್ಸ್) | ಅಮೃತ್ ಪಾಟೀಲ್, ಜನರಲ್ ಕನ್ಸಲ್ಟೆಂಟ್ | ಮಹೇಶ್ ಸಾವ್ಕೂರ್, ಜನರಲ್ ಕನ್ಸಲ್ಟೆಂಟ್ |
| 10 | ಟೇಬಲ್ ಟೆನ್ನಿಸ್ - ಮಹಿಳೆಯರು (ಸಿಂಗಲ್ಸ್) | ಎಲ್ಲಂಟಿ ತೇಜಸ್ವಿ, ಸೀನಿಯರ್ ಎಕ್ಸಿಕ್ಯೂಟಿವ್ | ಚಂದನ ಆರ್, ಎಕ್ಸಿಕ್ಯೂಟಿವ್ |
| 11 | ಪುರುಷರ ಚೆಸ್ | ಸುನಿಲ್ ಕುಮಾರ್ ಶರ್ಮಾ, ಸಹಾಯಕ ವ್ಯವಸ್ಥಾಪಕ | ರಂಗನಾಥ್, ಸಹಾಯಕ |
| 12 | ಮಹಿಳೆಯರ ಚೆಸ್ | ಶಿಲ್ಪಾ ಲತಾ ಬಿ, ಜನರಲ್ ಕನ್ಸಲ್ಟೆಂಟ್ | ಶ್ರುತಿ ಎಂ. ಕಸಾರ್, ಜನರಲ್ ಕನ್ಸಲ್ಟೆಂಟ್ |
| | | ಕ್ರಿಕೆಟ್ ಅತ್ಯಮೂಲ್ಯ ಆಟಗಾರ್ತಿ - ಬಿಂದು ಶ್ರೀ | ಕ್ರಿಕೆಟ್‌ನ ಅತ್ಯಮೂಲ್ಯ ಆಟಗಾರ - ಶಿರಾಜ್ ನವಾಜ್ |
| | | ಕ್ರಿಕೆಟ್ ಅತ್ಯುತ್ತಮ ಬ್ಯಾಟ್ಸ್‌ಮನ್ - ಬಿಂದು ಶ್ರೀ | ಕ್ರಿಕೆಟ್‌ನ ಅತ್ಯುತ್ತಮ ಬ್ಯಾಟ್ಸ್‌ಮನ್ - ಆದರ್ಶ ಗಣಪತಿ ಹೆಗಡೆ |
| | | ಕ್ರಿಕೆಟ್ ಅತ್ಯುತ್ತಮ ಬೌಲರ್ - ಚಂದನ ಎಸ್. | ಕ್ರಿಕೆಟ್ ಅತ್ಯುತ್ತಮ ಬೌಲರ್ - ಶಿರಾಜ್ ನವಾಜ್ |








**ನಿಮ್ಮ ಅತ್ಯುತ್ತಮ ಪ್ರದರ್ಶನ, ಬದ್ಧತೆ, ಕ್ರೀಡಾಸ್ಫೂರ್ತಿ ಮತ್ತು ತಂಡದ ಒಗ್ಗಟ್ಟಿಗಾಗಿ ಎಲ್ಲಾ ವಿಜೇತರು ಹಾಗೂ ರನ್ನರ್-ಅಪ್‌ಗಳಿಗೆ ಅಭಿನಂದನೆಗಳು...**

# 2026ರ ಸೆಪ್ಟೆಂಬರ್ 17ರಂದು ಬೆಂಗಳೂರಿನ ಕಾರ್ಪೊರೇಟ್ ಕಚೇರಿಯಲ್ಲಿ ಗೌರಿ–ಗಣೇಶ ಹಬ್ಬದ ಆಚರಣೆ





2026ರ ಸೆಪ್ಟೆಂಬರ್ 17ರಂದು ಕಾರ್ಪೊರೇಟ್ ಕಚೇರಿಯಲ್ಲಿ ಗೌರಿ ಗಣೇಶ ಹಬ್ಬವನ್ನು ಸಾಂಪ್ರದಾಯಿಕ ವಿಧಿವಿಧಾನಗಳು ಮತ್ತು ಪೂಜೆಯೊಂದಿಗೆ ಆಚರಿಸಲಾಯಿತು. ಸಂಸ್ಥೆ ಹಾಗೂ ಅದರ ನೌಕರರ ಸುಖ, ಸಮೃದ್ಧಿ ಮತ್ತು ಒಳಿತಿಗಾಗಿ ಶ್ರೀ ಗಣೇಶನ ಆಶೀರ್ವಾದವನ್ನು ಕೋರಿ ವಿಶೇಷ ಪ್ರಾರ್ಥನೆಗಳನ್ನು ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಬಿ–ರೈಡ್‌ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಲಕ್ಷ್ಮಣ್ ಸಿಂಗ್ ಅವರು ಉಪಸ್ಥಿತರಿದ್ದು, ಕಾರ್ಯಕ್ರಮಕ್ಕೆ ಮೆರುಗು ತಂದರು. ಅಲ್ಲದೆ, ಕ–ರೈಡ್‌ನ ಅಧಿಕಾರಿಗಳು ಮತ್ತು ಸಿಬ್ಬಂದಿ, ಜನರಲ್ ಕನ್ಸಲ್ಟೆಂಟ್ M/s RVNL, M/s NCC ಹಾಗೂ M/s CemIndia Engineers ಸಂಸ್ಥೆಗಳ ಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಹಬ್ಬದ ಸಂಭ್ರಮದಲ್ಲಿ ಪಾಲ್ಗೊಂಡರು.

## ಮುಖ್ಯಾಂಶಗಳು ಮತ್ತು ಮೈಲಿಗಲ್ಲುಗಳು

### ಬಿಎಸ್‌ಟಿಪಿ ಕಾರಿಡಾರ್–4ಎಗಾಗಿ 15.45 ಮೀಟರ್ ಉದ್ದದ ಮೊದಲ ಟಿ–ಗರ್ಡರ್ ಯಶಸ್ವಿಯಾಗಿ ಅಳವಡಿಕೆ

2026ರ ಜುಲೈ 31ರಂದು ಕಾರಿಡಾರ್–4ಎನ ಹುಸ್ಕೂರು ನಿಲ್ದಾಣದಲ್ಲಿ ಮೊದಲ 15.45 ಮೀಟರ್ ಉದ್ದದ ಟಿ–ಗರ್ಡರ್ ಅನ್ನು ಯಶಸ್ವಿಯಾಗಿ ಅಳವಡಿಸುವ ಮೂಲಕ ಮಹತ್ವದ ಮೈಲಿಗಲ್ಲೊಂದನ್ನು ಸಾಧಿಸಲಾಯಿತು. ಹೀಲಲಿಗೆಯಿಂದ ಕಗ್ಗದಾಸಪುರದವರೆಗೆ ವಿಸ್ತರಿಸಿರುವ ಕನಕ ಲೈನ್ ಒಟ್ಟು 9 ನಿಲ್ದಾಣಗಳನ್ನು ಒಳಗೊಂಡಿದೆ. ಈ ಮಾರ್ಗದಲ್ಲಿ ನಿರ್ಮಾಣ ಕಾಮಗಾರಿಗಳನ್ನು ತ್ವರಿತಗೊಳಿಸುವುದರ ಜೊತೆಗೆ ಗುಣಮಟ್ಟ ಮತ್ತು ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಪ್ರಿ–ಕಾಸ್ಟ್ ಟಿ–ಗರ್ಡರ್‌ಗಳನ್ನು ಬಳಸಲಾಗುತ್ತಿದೆ. ಪ್ರತಿ ಟಿ–ಗರ್ಡರ್ 15.45 ಮೀಟರ್ ಉದ್ದ ಮತ್ತು 47 ಟನ್ ತೂಕ ಹೊಂದಿದ್ದು, ಇದರ ನಿರ್ಮಾಣಕ್ಕೆ 17 ಘನ ಮೀಟರ್ ಎಂ50 ದರ್ಜೆಯ ಕಾಂಕ್ರೀಟ್ ಅಗತ್ಯವಿದೆ. ನಿಗದಿತ ಎಂಜಿನಿಯರಿಂಗ್ ಮತ್ತು ಸುರಕ್ಷತಾ ಮಾನದಂಡಗಳಿಗೆ ಅನುಗುಣವಾಗಿ, ಬಿ–ರೈಡ್ ಹಾಗೂ ಜನರಲ್ ಕನ್ಸಲ್ಟೆಂಟ್‌ಗಳ ಮೇಲ್ವಿಚಾರಣೆಯಲ್ಲಿ M/s RVNL-Rithwik (RPPL) ಸಂಸ್ಥೆಯು ಗರ್ಡರ್ ಅಳವಡಿಕೆ ಕಾರ್ಯವನ್ನು ಸುರಕ್ಷಿತವಾಗಿ ಪೂರ್ಣಗೊಳಿಸಿತು. ಈ ಮಹತ್ವದ ಸಾಧನೆಯು ಕಾರಿಡಾರ್–4ಎ ಕಾಮಗಾರಿಗಳ ನಿರಂತರ ಪ್ರಗತಿಯನ್ನು ಪ್ರತಿಬಿಂಬಿಸುವುದರ ಜೊತೆಗೆ, ಆಧುನಿಕ ನಿರ್ಮಾಣ ತಂತ್ರಜ್ಞಾನಗಳ ಮೂಲಕ ಕಾಮಗಾರಿಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವ ಬಿ–ರೈಡ್‌ನ ಬದ್ಧತೆಯನ್ನು ಮತ್ತಷ್ಟು ದೃಢಪಡಿಸುತ್ತದೆ. ಇದರೊಂದಿಗೆ ಬೆಂಗಳೂರಿಗೆ ಸುರಕ್ಷಿತ, ಪರಿಣಾಮಕಾರಿ ಮತ್ತು ಸುಸ್ಥಿರ ಉಪನಗರ ರೈಲು ಜಾಲವನ್ನು ಅಭಿವೃದ್ಧಿಪಡಿಸುವ ಕಾರ್ಯಕ್ಕೆ ಮತ್ತಷ್ಟು ವೇಗ ದೊರೆತಿದೆ.




### 51 ಮೂರು–ಕೋಚ್ ರೈಲು ಸೆಟ್‌ಗಳಿಗಾಗಿ ಐಸಿಎಫ್ ಜೊತೆ ಬಿ–ರೈಡ್ ಒಡಂಬಡಿಕೆ (MoU)ಗೆ ಸಹಿ

ಬಿ–ರೈಡ್ ಮತ್ತು ಚೆನ್ನೈನ ಇಂಟೆಗ್ರಲ್ ಕೋಚ್ ಫ್ಯಾಕ್ಟರಿ (ICF) ನಡುವೆ 2026ರ ಸೆಪ್ಟೆಂಬರ್ 1ರಂದು ಬಿಎಸ್‌ಟಿಪಿ ಯೋಜನೆಗಾಗಿ 3–ಕೋಚ್‌ಗಳ ರೈಲು ಸೆಟ್‌ಗಳನ್ನು ಒಳಗೊಂಡ 51 ರೈಲು ರೇಕ್‌ಗಳ ತಯಾರಿಕೆ ಮತ್ತು ಪೂರೈಕೆಗಾಗಿ ಒಡಂಬಡಿಕೆ ಪತ್ರ (MoU)ಕ್ಕೆ ಸಹಿ ಹಾಕಲಾಯಿತು. ಬಿ–ರೈಡ್‌ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಲಕ್ಷ್ಮಣ್ ಸಿಂಗ್ ಹಾಗೂ ಐಸಿಎಫ್‌ನ ಮಹಾಪ್ರಬಂಧಕರಾದ ಶ್ರೀ ಮನೀಶ್ ಅಗರ್ವಾಲ್ ಅವರ ಸಮ್ಮುಖದಲ್ಲಿ, ಎರಡೂ ಸಂಸ್ಥೆಗಳ ಹಿರಿಯ ಅಧಿಕಾರಿಗಳ ಉಪಸ್ಥಿತಿಯಲ್ಲಿ MoUಗೆ ಸಹಿ ಮಾಡಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಬಿ–ರೈಡ್‌ನ ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಲಕ್ಷ್ಮಣ್ ಸಿಂಗ್ ಅವರು, “ಈ ಬಿ–ರೈಡ್‌ನ ಗೆ ಸಹಿ ಹಾಕಿರುವುದು ಬಿಎಸ್‌ಟಿಪಿ ಅನುಷ್ಠಾನದಲ್ಲಿ ಮಹತ್ವದ ಮೈಲಿಗಲ್ಲಾಗಿದೆ. ಆಧುನಿಕ ರೈಲು ಬೋಗಿಗಳ ಖರೀದಿಯು ಸುರಕ್ಷಿತ, ವಿಶ್ವಾಸಾರ್ಹ ಮತ್ತು ಸುಸ್ಥಿರ ಉಪನಗರ ರೈಲು ಜಾಲವನ್ನು ಒದಗಿಸುವ ಯೋಜನೆಯ ಪ್ರಗತಿಗೆ ಮತ್ತಷ್ಟು ಬಲ ನೀಡಲಿದೆ. ಬಿಎಸ್‌ಟಿಪಿ ಮೂಲಕ ಬೆಂಗಳೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳ ನಡುವಿನ ಸಂಪರ್ಕ ಸುಧಾರಿಸಲಿದ್ದು, ರಸ್ತೆ ಆಧಾರಿತ ಪ್ರಯಾಣಕ್ಕೆ ಪ್ರಯಾಣಿಕರಿಗೆ ಪರಿಣಾಮಕಾರಿ ಪರ್ಯಾಯ ವ್ಯವಸ್ಥೆ ದೊರೆಯಲಿದೆ ಹಾಗೂ ನಗರದ ಸಂಚಾರ ದಟ್ಟಣೆ ಕಡಿಮೆ ಮಾಡಲು ಸಹಕಾರಿಯಾಗಲಿದೆ” ಎಂದು ತಿಳಿಸಿದರು. ಈ MoUಗೆ ಸಹಿ ಹಾಕಿರುವುದು ಬಿಎಸ್‌ಟಿಪಿ ಯೋಜನೆಯ ಅನುಷ್ಠಾನದಲ್ಲಿ ಮಹತ್ವದ ಪ್ರಗತಿಯನ್ನು ಸೂಚಿಸುವುದರ ಜೊತೆಗೆ, ಬೆಂಗಳೂರಿನ ನಗರ ಸಾರಿಗೆ ವ್ಯವಸ್ಥೆಯನ್ನು ಪರಿವರ್ತಿಸುವ ಯೋಜನೆಯ ದೂರದೃಷ್ಟಿಗೆ ಮತ್ತಷ್ಟು ವೇಗ ನೀಡಿದೆ.




# ಕಾಮಗಾರಿಗಳ ಪ್ರಗತಿ

## ಕಾರಿಡಾರ್–2ಎ ನಿಲ್ದಾಣ ಪ್ಯಾಕೇಜ್

ಬೆನ್ನಿಗಾನಹಳ್ಳಿ, ಕಸ್ತೂರಿ ನಗರ, ಸೇವಾ ನಗರ, ಬಾಣಸವಾಡಿ, ನಾಗವಾರ, ಕನಕ ನಗರ, ಹೆಬ್ಬಾಳ ಮತ್ತು ಮತ್ತಿಕೆರೆ ಸೇರಿದಂತೆ ಒಟ್ಟು 8 ಬಿಎಸ್‌ಟಿಪಿ ನಿಲ್ದಾಣಗಳ ನಿರ್ಮಾಣವನ್ನು ಈ ಪ್ಯಾಕೇಜ್ ಒಳಗೊಂಡಿದೆ. ಇದರಲ್ಲಿ 1 ಎಲಿವೇಟೆಡ್ ಇಂಟರ್‌ಚೇಂಜ್ ನಿಲ್ದಾಣ, 3 ಎಲಿವೇಟೆಡ್ ನಿಲ್ದಾಣಗಳು ಹಾಗೂ 4 ಭೂಮಟ್ಟದ (At-Grade) ನಿಲ್ದಾಣಗಳು ಸೇರಿವೆ. ಈ ಕಾಮಗಾರಿಯ ವ್ಯಾಪ್ತಿಯಲ್ಲಿ ಸಿವಿಲ್ ಮತ್ತು ರಚನಾತ್ಮಕ ಕಾಮಗಾರಿಗಳು, ಪ್ರವೇಶ/ನಿರ್ಗಮನ ರಚನೆಗಳು, ಸ್ಟೀಲ್ ಫುಟ್ ಓವರ್ ಬ್ರಿಡ್ಜ್ (FOB), ಮೇಲ್ಛಾವಣಿ ರಚನೆಗಳು, PEB ಕಾಮಗಾರಿಗಳು,ಆರ್ಕಿಟೆಕ್ಚರಲ್‌ಫಿನಿಷಿಂಗ್, ಪ್ಲಂಬಿಂಗ್, ಫಸಾಡ್, E&M ಕಾಮಗಾರಿಗಳು, ವಿವರವಾದ ವಿನ್ಯಾಸ ಮತ್ತು ಎಂಜಿನಿಯರಿಂಗ್ (DDC) ಹಾಗೂ ಎಲ್ಲಾ ಸಂಬಂಧಿತ ಕಾಮಗಾರಿಗಳು ಒಳಗೊಂಡಿವೆ. ಈ ಕಾಮಗಾರಿಗೆ ಸಂಬಂಧಿಸಿದ ಒಪ್ಪಂದವನ್ನು 2024ರ ಡಿಸೆಂಬರ್ 31ರಂದು M/s. NCC Limited ಜೊತೆ ₹501.25 ಕೋಟಿ ಒಟ್ಟು ಗುತ್ತಿಗೆ ಮೊತ್ತಕ್ಕೆ (ಎಲ್ಲಾ ತೆರಿಗೆಗಳು ಮತ್ತು ಜಿಎಸ್‌ಟಿ ಸೇರಿದಂತೆ) ಜಾರಿಗೊಳಿಸಲಾಯಿತು. ಈ ಪ್ಯಾಕೇಜ್‌ನ ಕಾಮಗಾರಿ ಪೂರ್ಣಗೊಳಿಸುವ ಅವಧಿ 24 ತಿಂಗಳು ಆಗಿದೆ.

### ಕಸ್ತೂರಿನಗರ ನಿಲ್ದಾಣ

| Description | ಪ್ರಾಥಮಿಕ ಕೆಲಸಗಳು | ರ್‍ಯಾಫ್ಟ್ ಪಿಸಿಸಿ | ರ್‍ಯಾಫ್ಟ್ ಆರ್‌ಸಿಸಿ | ಪಿಯರ್ | ಪೋರ್ಟಲ್ ಬೀಮ್ | ಸ್ಟೇಷನ್ ವಾಲ್ |
|---|---|---|---|---|---|---|
| ವ್ಯಾಪ್ತಿ | 205 | 205 | 205 | 26 | 13 | 820 |
| ಪೂರ್ಣಗೊಂಡಿರುವುದು | 205 | 205 | 205 | 26 | 13 | 196 |
| ಪೂರ್ಣಗೊಂಡ % | 100% | 100% | 100% | 100% | 100% | 24% |



ಕಸ್ತೂರಿನಗರ ನಿಲ್ದಾಣದಲ್ಲಿ P9, P10, P12 ಮತ್ತು P13 ಪೋರ್ಟಲ್ ಬೀಮ್‌ಗಳ ಕಾಂಕ್ರೀಟೀಕರಣ ಕಾಮಗಾರಿ ಪೂರ್ಣಗೊಂಡಿದೆ.

### ಬಾಣಸವಾಡಿ ನಿಲ್ದಾಣ

| ವಿವರ | ಪ್ರಾಥಮಿಕ ಕೆಲಸಗಳು | ರ್‍ಯಾಫ್ಟ್ ಪಿಸಿಸಿ | ರ್‍ಯಾಫ್ಟ್ ಆರ್‌ಸಿಸಿ | ಬೇಸ್‌ಮೆಂಟ್ ಸ್ಲ್ಯಾಬ್ | ಪಿಯರ್ | ಪೋರ್ಟಲ್ ಬೀಮ್ |
|---|---|---|---|---|---|---|
| ವ್ಯಾಪ್ತಿ | 205 | 205 | 205 | 102.5 | 26 | 13 |
| ಪೂರ್ಣಗೊಂಡಿರುವುದು | 205 | 100 | 79.5 | 41 | 10 | 0 |
| ಪೂರ್ಣಗೊಂಡ % | 100% | 49% | 38.7% | 40% | 38.4% | 0% |



ಬಾಣಸವಾಡಿ ನಿಲ್ದಾಣದ ಕಾಮಗಾರಿಯ ಪ್ರಗತಿಯಲ್ಲಿದೆ

### ಹೆಬ್ಬಾಳ ನಿಲ್ದಾಣ

| ವಿವರ | ಪ್ರಾಥಮಿಕ ಕೆಲಸಗಳು | ರ್‍ಯಾಫ್ಟ್ ಪಿಸಿಸಿ | ರ್‍ಯಾಫ್ಟ್ ಆರ್‌ಸಿಸಿ | ಪಿಯರ್ | ಪೋರ್ಟಲ್ ಬೀಮ್ |
|---|---|---|---|---|---|
| ವ್ಯಾಪ್ತಿ | 205 | 205 | 205 | 26 | 13 |
| ಪೂರ್ಣಗೊಂಡಿರುವುದು | 205 | 205 | 205 | 17 | 0 |
| ಪೂರ್ಣಗೊಂಡ % | 100% | 100% | 38.7% | 65.38% | 0% |



ರಾಫ್ಟ್ ಕಾಂಕ್ರೀಟೀಕರಣ ಕಾಮಗಾರಿ ಪೂರ್ಣಗೊಂಡಿದೆ



P1A, P6A, P7A, P7C, P8A ಮತ್ತು P8C-09 ಪಿಯರ್‌ಗಳ ಕಾಂಕ್ರೀಟೀಕರಣ ಕಾಮಗಾರಿ ಪೂರ್ಣಗೊಂಡಿದೆ



ಬಾಣಸವಾಡಿ ನಿಲ್ದಾಣದ ಬೇಸ್‌ಮೆಂಟ್ ಪಿಯರ್‌ಗಳಾದ P4A, P3A, C1 ಮತ್ತು P5A ಗಳ ಕ್ಯೂರಿಂಗ್ ಕಾಮಗಾರಿ ಪ್ರಗತಿಯಲ್ಲಿದೆ.

### ಹೆಬ್ಬಾಳ ನಿಲ್ದಾಣ

| ವಿವರ | ಪ್ರಾಥಮಿಕ ಕೆಲಸಗಳು | ರ್‍ಯಾಫ್ಟ್ ಪಿಸಿಸಿ | ರ್‍ಯಾಫ್ಟ್ ಆರ್‌ಸಿಸಿ | ಪಿಯರ್ |
|---|---|---|---|---|
| ವ್ಯಾಪ್ತಿ | 205 | 140 | 140 | 26 |
| ಪೂರ್ಣಗೊಂಡಿರುವುದು | 140 | 38 | 32 | 0 |
| ಪೂರ್ಣಗೊಂಡ % | 68.3% | 27% | 22.8% | 0% |



PCC ಕ್ಯೂರಿಂಗ್ ಕಾಮಗಾರಿ ಪ್ರಗತಿಯಲ್ಲಿದೆ.



ರಾಫ್ಟ್ ಕ್ಯೂರಿಂಗ್ ಕಾಮಗಾರಿ ಪ್ರಗತಿಯಲ್ಲಿದೆ.

## ಕಾರಿಡಾರ್–2ಬಿ ನಿಲ್ದಾಣ ಪ್ಯಾಕೇಜ್

ಸಿ2ಬಿ ಪ್ಯಾಕೇಜ್‌ನಲ್ಲಿ ನಾಲ್ಕು (04) ನಿಲ್ದಾಣಗಳಿದ್ದು, ಅವುಗಳಲ್ಲಿ ಎಲಿವೇಟೆಡ್ (1 ಸಂಖ್ಯೆ), ಎಲಿವೇಟೆಡ್ ಇಂಟರ್‌ಚೇಂಜ್ (1 ಸಂಖ್ಯೆ) ಹಾಗೂ ಅಟ್–ಗ್ರೇಡ್ (2 ಸಂಖ್ಯೆಗಳು) ಬಿಎಸ್‌ಟಿಪಿ ನಿಲ್ದಾಣಗಳು ಸೇರಿವೆ. ಇವು ಕಾರಿಡಾರ್–2ರ ಯಶವಂತಪುರ, ಶೆಟ್ಟಿಹಳ್ಳಿ, ಮೈದರಹಳ್ಳಿ ಮತ್ತು ಚಿಕ್ಕಬಾಣಾವರದಲ್ಲಿ ಸ್ಥಾಪಿಸಲಾಗುತ್ತಿವೆ. ಇದರಲ್ಲಿ ಸೋಲದೇವನಹಳ್ಳಿ ಡಿಪೋ ಕಡೆಗೆ ಇಳಿಜಾರು ರ್‍ಯಾಂಪ್ ಒಳಗೊಂಡ ಸುಮಾರು 500 ಮೀಟರ್ ಉದ್ದದ ಎಲಿವೇಟೆಡ್ ವಯಾಡಕ್ಟ್ ಕೂಡ ಸೇರಿದೆ. ಈ ಪ್ಯಾಕೇಜ್‌ನಲ್ಲಿ ಸಿವಿಲ್ ಕಾಮಗಾರಿ, ಸ್ಟ್ರಕ್ಚರಲ್ ಕಾಮಗಾರಿ, ಪ್ರವೇಶ / ನಿರ್ಗಮನ ರಚನೆಗಳು, ಸ್ಟೀಲ್ ಫುಟ್ ಓವರ್ ಬ್ರಿಡ್ಜ್ , ಮೇಲ್ಛಾವಣಿ ರಚನೆಗಳು, PEB ಕಾಮಗಾರಿಗಳು, ಆರ್ಕಿಟೆಕ್ಚರಲ್ ಫಿನಿಷಿಂಗ್, ಪ್ಲಂಬಿಂಗ್, ಫಸಾಡ್, E&M ಕಾಮಗಾರಿಗಳು ಹಾಗೂ ಬಿಎಸ್‌ಟಿಪಿಗೆ ಸಂಬಂಧಿಸಿದ ಎಲ್ಲಾ ಸಹಾಯಕ ಕಾಮಗಾರಿಗಳೊಂದಿಗೆ ವಿವರವಾದ ವಿನ್ಯಾಸ ಮತ್ತು ಎಂಜಿನಿಯರಿಂಗ್ ಕಾರ್ಯಗಳು ಒಳಗೊಂಡಿವೆ. ಈ ಕಾಮಗಾರಿಗೆ ಸಂಬಂಧಿಸಿದ ಒಪ್ಪಂದವನ್ನು 23ನೇ ಏಪ್ರಿಲ್ 2025ರಂದು M/s. ITD Cemetation India Ltd. (ಪ್ರಸ್ತುತ M/s. CEMINDIA Projects Ltd.) ಸಂಸ್ಥೆಯೊಂದಿಗೆ ₹ 525.52 ಕೋಟಿ ಒಪ್ಪಂದ ಮೊತ್ತಕ್ಕೆ, ಎಲ್ಲಾ ತೆರಿಗೆಗಳು ಮತ್ತು ಜಿಎಸ್‌ಟಿ ಒಳಗೊಂಡಂತೆ, ಮಾಡಿಕೊಳ್ಳಲಾಗಿದೆ. ಈ ಪ್ಯಾಕೇಜ್‌ನ ಕಾಮಗಾರಿ ಪೂರ್ಣಗೊಳಿಸುವ ಅವಧಿ 24 ತಿಂಗಳುಗಳಾಗಿದೆ.

### ಯಶವಂತಪುರ ನಿಲ್ದಾಣ (ಸಿ2 ಮತ್ತು ಸಿ1 ಕಾರಿಡಾರ್‌ಗಳಿಗೆ ಎಲಿವೇಟೆಡ್ ಇಂಟರ್‌ಚೇಂಜ್)

| ವಿವರ | ಪ್ರಾಥಮಿಕ ಕೆಲಸಗಳು (ಆರ್‌ಎಂಟಿ) | ಡಿ.ವಾಲ್ (ಸಂಖ್ಯೆ) | ಬ್ಯಾರೆಟ್ ಕಾಲಮ್ (ಸಂಖ್ಯೆ) | ನೆಲಮಹಡಿ ಸ್ಲ್ಯಾಬ್ (ಆರ್‌ಎಂಟಿ) | ಪೂರ್ಣಗೊಂಡ ಬೆಸ್‌ಮೆಂಟ್–1 ಸ್ಲ್ಯಾಬ್ (ಆರ್‌ಎಂಟಿ) | ಕಾಲಮ್–ಜಿಎಲ್ ನಿಂದ ಸಿಸಿಎಲ್‌ವರೆಗೆ (ಸಂಖ್ಯೆ) | ಕಾನ್‌ಕೋರ್ಸ್ ಫ್ಲೋರ್ ಸ್ಲ್ಯಾಬ್ (ಆರ್‌ಎಂಟಿ) |
|---|---|---|---|---|---|---|---|
| ವ್ಯಾಪ್ತಿ | 205 | 108 | 55 | 205 | 205 | 93 | 205 |
| ಪೂರ್ಣಗೊಂಡಿರುವುದು | 205 | 106 | 55 | 168 | 138 | 53 | 60 |
| ಪೂರ್ಣಗೊಂಡ % | 100% | 96.29% | 100% | 81.95% | 67.31% | 56.98% | 29.26% |

| ವಿವರ | ಕಾಲಮ್–ಸಿಸಿಎಲ್ ನಿಂದ ಎಲ್‌ಪಿಎಫ್ ವರೆಗೆ (ಸಂಖ್ಯೆ) | ಕಾಲಮ್–ಬೇಸ್‌ಮೆಂಟ್–1 ರಿಂದ ಬೇಸ್‌ಮೆಂಟ್–2 ವರೆಗೆ (ಸಂಖ್ಯೆ) | ಪೂರ್ಣಗೊಂಡ ಬೇಸ್‌ಮೆಂಟ್–2 (ಆರ್‌ಎಂಟಿ) |
|---|---|---|---|
| ವ್ಯಾಪ್ತಿ | 93 | 08 | 205 |
| ಪೂರ್ಣಗೊಂಡಿರುವುದು | 02 | 03 | 107 |
| ಪೂರ್ಣಗೊಂಡ % | 10% | 37.5% | 47.31% |


ಸ್ಟ್ರಕ್ಚರ್ ಐಡಿ: ಬೇಸ್‌ಮೆಂಟ್ 2, ಗ್ರಿಡ್ 6–7 ಕಾಂಕ್ರೀಟ್ ಸುರಿಯುವ ಕಾಮಗಾರಿ ಪ್ರಗತಿಯಲ್ಲಿದೆ.


ಡಿ–ವಾಲ್ ಪ್ಯಾನೆಲ್ ಇಡಿ–45 ಕೇಜ್ ಇಳಿಸುವ ಕಾಮಗಾರಿ ಪ್ರಗತಿಯಲ್ಲಿದೆ.

### ಶೆಟ್ಟಿಹಳ್ಳಿ ನಿಲ್ದಾಣ (ಅಟ್–ಗ್ರೇಡ್ ನಿಲ್ದಾಣ)

| ವಿವರ | ಪ್ರಾಥಮಿಕ ಕೆಲಸಗಳು(ಆರ್‌ಎಂಟಿ) | ಪೂರ್ಣಗೊಂಡ ನೆಲಮಹಡಿ ರ್‍ಯಾಫ್ಟ್ (ಆರ್‌ಎಂಟಿ) | ರಿಟೈನಿಂಗ್ ಗೋಡೆ (ಆರ್‌ಎಂಟಿ) | ಕಾಲಮ್–ಜಿಎಫ್‌ನಿಂದ ಸಿಎಲ್‌ವರೆಗೆ (ಸಂಖ್ಯೆ) | ಪ್ಲಾಟ್‌ಫಾರಂ ಗೋಡೆ (ಆರ್‌ಎಂಟಿ) | ಕಾನ್‌ಕೋರ್ಸ್ ಸ್ಲ್ಯಾಬ್ (ಆರ್‌ಎಂಟಿ) | ಕಾಲಮ್ ಟಿಎಲ್ |
|---|---|---|---|---|---|---|---|
| ವ್ಯಾಪ್ತಿ | 205 | 205 | 205 | 32 | 615 | 205 | 18 |
| ಪೂರ್ಣಗೊಂಡಿರುವುದು | 205 | 205 | 205 | 32 | 615 | 45 | 16 |
| ಪೂರ್ಣಗೊಂಡ % | 100% | 100% | 100% | 100% | 100% | 22% | 83% |


ಗ್ರಿಡ್ 4–6 ಸಿಸಿಎಲ್ ಬೀಮ್ ಶಟರಿಂಗ್ ಕಾಮಗಾರಿ ಪ್ರಗತಿಯಲ್ಲಿದೆ.


ಗ್ರಿಡ್ 11–13ರಲ್ಲಿ CCL ಸ್ಲ್ಯಾಬ್ ರೀನ್‌ಫೋರ್ಸ್‌ಮೆಂಟ್ ಕಾಮಗಾರಿ ಪ್ರಗತಿಯಲ್ಲಿದೆ.

### ಮ್ಯಾಡರಹಳ್ಳಿ ನಿಲ್ದಾಣ (MYD)(ಅಟ್–ಗ್ರೇಡ್ ನಿಲ್ದಾಣ)

| ವಿವರ | ಪ್ರಾಥಮಿಕ ಕೆಲಸಗಳು (ಆರ್‌ಎಂಟಿ) | ಪೂರ್ಣಗೊಂಡ ನೆಲಮಹಡಿ ರ್‍ಯಾಫ್ಟ್ (ಆರ್‌ಎಂಟಿ) | ರಿಟೈನಿಂಗ್ ಗೋಡೆ (ಆರ್‌ಎಂಟಿ) | ಕಾಲಮ್–ಜಿಎಫ್‌ಎಲ್ ನಿಂದ ಸಿಸಿಎಲ್‌ವರೆಗೆ (ಸಂಖ್ಯೆ) | ಪ್ಲಾಟ್‌ಫಾರಂ ಗೋಡೆ (ಆರ್‌ಎಂಟಿ) | ಕಂಬೈನ್ಡ್ ಫೂಟಿಂಗ್ (ಸಂಖ್ಯೆ) | ಕಾಲಮ್–ಸಿಎಫ್ ನಿಂದ ಟಿಎಲ್‌ವರೆಗೆ (ಸಂಖ್ಯೆ) | ಕಾನ್‌ಕೋರ್ಸ್ ಸ್ಲ್ಯಾಬ್ (ಆರ್‌ಎಂಟಿ) | ಪ್ಲಾಟ್‌ಫಾರಂ ಸ್ಲ್ಯಾಬ್ (ಆರ್‌ಎಂಟಿ) | ಕಾಲಮ್ ಟಿಎಲ್ |
|---|---|---|---|---|---|---|---|---|---|---|
| ವ್ಯಾಪ್ತಿ | 205 | 93.12 | 205 | 14 | 558 | 7 | 14 | 205 | 205 | 32 |
| ಪೂರ್ಣಗೊಂಡಿರುವುದು | 205 | 93.12 | 205 | 14 | 500 | 7 | 14 | 71 | 49 | 16 |
| ಪೂರ್ಣಗೊಂಡ % | 100% | 100% | 100% | 100% | 90% | 100% | 100% | 34.63% | 23.90% | 50% |


ಗ್ರಿಡ್–04 ರಿಂದ 07 ರವರೆಗೆ LHS ಮತ್ತು RHSನಲ್ಲಿ ಪ್ಲಾಟ್‌ಫಾರ್ಮ್ ಮಟ್ಟದ ಸ್ಲ್ಯಾಬ್ ಶಟರಿಂಗ್ ಹಾಗೂ ರೀನ್‌ಫೋರ್ಸ್‌ಮೆಂಟ್ ಫಿಕ್ಸಿಂಗ್ ಕಾಮಗಾರಿ ಪ್ರಗತಿಯಲ್ಲಿದೆ.


ಗ್ರಿಡ್ 9–10ರಲ್ಲಿ CCL ಸ್ಲ್ಯಾಬ್ ರೀನ್‌ಫೋರ್ಸ್‌ಮೆಂಟ್ ಮತ್ತು ಶಟರಿಂಗ್ ಕಾಮಗಾರಿ ಪ್ರಗತಿಯಲ್ಲಿದೆ.


Follow us on

## ಚಿಕ್ಕಬಾಣಾವರ ನಿಲ್ದಾಣ (ಎತ್ತರಿಸಿದ ನಿಲ್ದಾಣ)

| ವಿವರ | ಪ್ರಾಥಮಿಕ ಕೆಲಸಗಳು (ಆರ್‌ಎಂಟಿ) | ಪೂರ್ಣಗೊಂಡ ನೆಲಮಹಡಿ ಡ್ರಾಫ್ಟ್ (ಆರ್‌ಎಂಟಿ) | ಕಾಲಮ್-ನೆಲಮಹಡಿ ಯಿಂದ ಕಾನ್‌ಕೋರ್ಸ್ ವರೆಗೆ (ಸಂಖ್ಯೆ) | ಪಿಯರ್ ಆರ್ಮ್ (ಸಂಖ್ಯೆ) | ಪೈಲ್ (ಸಂಖ್ಯೆ) |
|---|---|---|---|---|---|
| ವ್ಯಾಪ್ತಿ | 205 | 205 | 11 | 10 | 20 |
| ಪೂರ್ಣಗೊಂಡಿರುವುದು | 205 | 138 | 11 | 06 | 20 |
| ಪೂರ್ಣಗೊಂಡ % | 100% | 67.31% | 100% | 60% | 100% |


SP-07 ಪಿಯರ್ ಆರ್ಮ್ ಶಟರಿಂಗ್ ಕಾಮಗಾರಿ ಪ್ರಗತಿಯಲ್ಲಿದೆ.


SP-05 ಪಿಯರ್ ಆರ್ಮ್ ಕಾಂಕ್ರೀಟಿಂಗ್ ಕಾಮಗಾರಿ ಪ್ರಗತಿಯಲ್ಲಿದೆ.

## ಚಿಕ್ಕಬಾಣಾವರದಿಂದ ಸೋಲದೇವನಹಳ್ಳಿ ಡಿಪೋವರೆಗೆ 625 ಮೀಟರ್ ಉದ್ದದ ವಯಾಡಕ್ಟ್

| ವಿವರ | ಪೈಲ್ | ಪೈಲ್ ಕ್ಯಾಪ್ | ಪಿಯರ್ | ಪಿಯರ್ ಕ್ಯಾಪ್ |
|---|---|---|---|---|
| ವ್ಯಾಪ್ತಿ | 138 | 29 | 29 | 16 |
| ಪೂರ್ಣಗೊಂಡಿರುವುದು | 114 | 15 | 14 | 08 |
| ಪೂರ್ಣಗೊಂಡ % | 81.88% | 51.72% | 44.82% | 50% |


P18/1 ಸ್ಥಿರ ಭಾರ ಪರೀಕ್ಷೆ ಪೂರ್ಣಗೊಂಡಿದೆ.


P13 ಪಿಯರ್ ಕ್ಯಾಪ್‌ನ ಕೆಳಭಾಗದ ಶಟರ್ ಅಲೈನ್‌ಮೆಂಟ್ ಕಾಮಗಾರಿ ಪ್ರಗತಿಯಲ್ಲಿದೆ.

## ಕಾಸ್ಟಿಂಗ್ ಯಾರ್ಡ್

| ವಿವರ | ಪ್ರಾಥಮಿಕ ಕೆಲಸಗಳು (ಆರ್‌ಎಂಟಿ) |
|---|---|
| ವ್ಯಾಪ್ತಿ | 124 |
| ಪೂರ್ಣಗೊಂಡಿರುವುದು | 53 |
| ಪೂರ್ಣಗೊಂಡ % | 41.93% |


P11–P12 I-Girder ಸ್ಪ್ಯಾನ್‌ನಲ್ಲಿ ಪೋಸ್ಟ್ ಟೆನ್ಷನಿಂಗ್ ಕಾಮಗಾರಿ – G3 ಮೊದಲ ಹಂತದ ಸ್ಟ್ರೆಸ್ಸಿಂಗ್ ಪ್ರಗತಿಯಲ್ಲಿದೆ.


P13–P14 G14 I-Girder ಕಾಂಕ್ರೀಟಿಂಗ್ ಕಾಮಗಾರಿ.


P13–P14 G1 I-Girder ರೀನ್‌ಫೋರ್ಸ್‌ಮೆಂಟ್ ಮತ್ತು ಪ್ರೊಫೈಲಿಂಗ್ ಕಾಮಗಾರಿ ಪ್ರಗತಿಯಲ್ಲಿದೆ.

## ಕಾರಿಡಾರ್–2 ಪ್ಯಾಕೇಜ್–2

ಬೆಂಗಳೂರು ಉಪನಗರ ಸಾರಿಗೆ ಯೋಜನೆಯ ಕಾರಿಡಾರ್–2 ರ ಅಡಿಯಲ್ಲಿ, ಬೆನ್ನಿಗಾನಹಳ್ಳಿಯಿಂದ ಬಾಣಸವಾಡಿ ಮತ್ತು ಬಾಣಸವಾಡಿಯಿಂದ ಹೆಬ್ಬಾಳದವರೆಗಿನ ಮಾರ್ಗದಲ್ಲಿ (ನಿಲ್ದಾಣದ ಕಟ್ಟಡಗಳನ್ನು ಹೊರತುಪಡಿಸಿ) ಈ ಕೆಳಗಿನ ಕಾಮಗಾರಿಗಳನ್ನು ಕೈಗೊಳ್ಳುವುದು: 11.569 ಕಿ.ಮೀ (ಚೈನೇಜ್: –0.964 ಕಿ.ಮೀ. ರಿಂದ –0.675 ಕಿ.ಮೀ. ವರೆಗೆ, ಚೈನೇಜ್: –0.050 ಕಿ.ಮೀ. ರಿಂದ 4.700 ಕಿ.ಮೀ. ವರೆಗೆ ಹಾಗೂ ಚೈನ್‌ನೇಜ್: 4.700 ಕಿ.ಮೀ. ರಿಂದ 11.230 ಕಿ.ಮೀ. ವರೆಗೆ) ಉದ್ದದ ನೆಲಮಟ್ಟದ ವಿಭಾಗಕ್ಕಾಗಿ ಎಂಬಾರ್ಕ್‌ಮೆಂಟ್ ಮತ್ತು ಕಟಿಂಗ್‌ಗಳ ರಚನೆ (ಬ್ಲಾಂಕೆಟಿಂಗ್ ಸೇರಿದಂತೆ), ಪ್ರಮುಖ ಹಾಗೂ ಸಣ್ಣ ಸೇತುವೆಗಳು, ಆರ್‌ಯುಬಿ, ಇಆರ್‌ಎಸ್ / ತಡೆಗೋಡೆಗಳು, ಸ್ಯಾಕ್ರಿಫಿಸಿಯಲ್ ತಡೆಗೋಡೆಗಳು, ಚರಂಡಿಗಳು, ಗಡಿ ಗೋಡೆಗಳು ಮತ್ತು ಬೇಲಿ ನಿರ್ಮಾಣ; ತಲಾ 6.53 ಕಿ.ಮೀ ಉದ್ದದ 4 ಹಳಿಗಳ ಜೋಡಣೆ; ನಾಗವಾರ ಮತ್ತು ಕನಕನಗರ ನಿಲ್ದಾಣದ ಪ್ರದೇಶಗಳ ನಿರ್ಮಾಣ; ಹಾಗೂ ಹಿಂದಿನ ಗುತ್ತಿಗೆದಾರರು ನಿರ್ವಹಿಸಿದ ಕಾಮಗಾರಿಗಳಿಗೆ ಸಂಬಂಧಿಸಿದ ವಿನ್ಯಾಸದ ಮೌಲ್ಯಮಾಪನ ಮತ್ತು ಅಗತ್ಯವಿರುವ ಕಡೆಗಳಲ್ಲಿ ಸ್ಥಿರತೆಯ ಪರಿಶೀಲನೆ (ಇವುಗಳ ಜೊತೆಗೆ ಐಆರ್ ಕಾರಿಡಾರ್‌ಗಾಗಿ ಸುಮಾರು 6.10 ಕಿ.ಮೀ ಉದ್ದದ ಕಾಮಗಾರಿ ಮತ್ತು ಇತರ ಸಂಬಂಧಿತ ಮೂಲಸೌಕರ್ಯ ಕಾಮಗಾರಿಗಳು).

### ಪ್ರಗತಿ

| ಸಂರಚನೆ | ವಿವರ | ಒಟ್ಟು ಕಾರ್ಯವ್ಯಾಪ್ತಿ | ಪೂರ್ಣಗೊಂಡಿರುವುದು | ಬಾಕಿ |
|---|---|---|---|---|
| ಇಆರ್‌ಎಸ್ | ರಾಫ್ಟ್ (ಮೀಟರ್) | 6103 | 271 | 5832 |
| ಇಆರ್‌ಎಸ್ | 1ನೇ ಹಂತದ ಗೋಡೆ (ಮೀಟರ್) | 6103 | 306 | 5797 |
| ಇಆರ್‌ಎಸ್ | 2ನೇ ಹಂತದ ಗೋಡೆ (ಮೀಟರ್) | 6213 | 399 | 5814 |
| ಇಆರ್‌ಎಸ್ | 3ನೇ ಹಂತದ ಗೋಡೆ (ಮೀಟರ್) | 6973 | 210 | 6763 |
| ಇಆರ್‌ಎಸ್ | 4ನೇ ಹಂತದ ಗೋಡೆ (ಮೀಟರ್) | 4000 | 92 | 3908 |
| ಇಆರ್‌ಎಸ್ | 5ನೇ ಹಂತದ ಗೋಡೆ (ಮೀಟರ್) | 3717 | 100 | 3617 |
| ಇಆರ್‌ಎಸ್ | 6ನೇ ಹಂತದ ಗೋಡೆ (ಮೀಟರ್) | 3425 | 85 | 3340 |
| ಇಆರ್‌ಎಸ್ | 7ನೇ ಹಂತದ ಗೋಡೆ (ಮೀಟರ್) | 2915 | 40 | 2875 |
| ಇಆರ್‌ಎಸ್ | 8ನೇ ಹಂತದ ಗೋಡೆ (ಮೀಟರ್) | 2625 | 0 | 2625 |
| ಇಆರ್‌ಎಸ್ | 9ನೇ ಹಂತದ ಗೋಡೆ (ಮೀಟರ್) | 1110 | 0 | 1110 |
| ಇಆರ್‌ಎಸ್ | 10ನೇ ಹಂತದ ಗೋಡೆ (ಮೀಟರ್) | 850 | 0 | 850 |
| ಎಸ್‌ಡಬ್ಲ್ಯೂಆರ್ | ಸ್ಯಾಕ್ರಿಫಿಷಿಯಲ್ ವಾಲ್ | 3716 | 200 | 3516 |
| ಎಂಐಬಿಗಳು | ಎಂಐಬಿ (ಸಂಖ್ಯೆ) | 28 | 01 (WIP) | 27 |
| ಆರ್‌ಯುಬಿಗಳು | ಆರ್‌ಯುಬಿ(ಸಂಖ್ಯೆ) | 15 | 00 | 15 |


ಎಂಐಬಿ 548 ರಿಟರ್ನ್ ವಾಲ್‌ನ 2ನೇ ಲಿಫ್ಟ್ ಗೋಡೆಯ ಕಾಂಕ್ರೀಟ್ ಕಾಮಗಾರಿ


ಇಆರ್‌ಎಸ್ ಗೋಡೆಯ ರಾಫ್ಟ್ ಕಾಂಕ್ರೀಟಿಂಗ್ ಕಾಮಗಾರಿ


ಸಾಕ್ರಿಫಿಸಿಯಲ್ ತಡೆಗೋಡೆಯ ಸ್ಥಳದಲ್ಲೇ ಸುರಿಯುವ ರಾಫ್ಟ್‌ನ ಕಬ್ಬಿಣದ ಬಲವರ್ಧನೆ ಮತ್ತು ಫಾರ್ಮ್‌ವರ್ಕ್ ಕಾಮಗಾರಿ.


ಇಆರ್‌ಎಸ್ ರಾಫ್ಟ್ ಕಾಮಗಾರಿ

## ಕಾರಿಡಾರ್–2 ಪ್ಯಾಕೇಜ್–3

ಬಿಎಸ್‌ಟಿಪಿ ಕಾರಿಡಾರ್‌ನಲ್ಲಿನ 5.80 ಕಿ.ಮೀ. ಉದ್ದದ (ಚ. 18.400 ಕಿ.ಮೀ. ರಿಂದ ಚ. 24.200 ಕಿ.ಮೀ.ವರೆಗೆ) ಅಟ್–ಗ್ರೇಡ್ ವಿಭಾಗದಲ್ಲಿ (ಉಳಿದ ಕಾಮಗಾರಿಗಳು) ಎಂಬ್ಯಾಂಕ್‌ಮೆಂಟ್‌ಗಳು, ಕಟಿಂಗ್‌ಗಳು ಸೇರಿದಂತೆ ಬ್ಲಾಂಕೆಟಿಂಗ್, ರ್‍ಯಾಂಪ್, ಆರ್.ಒ.ಬಿ., ಸಣ್ಣ ಸೇತುವೆಗಳು, ಆರ್.ಯು.ಬಿ. ಇ.ಆರ್.ಎಸ್./ತಡೆಗೋಡೆ, ಸ್ಯಾಕ್ರಿಫಿಸಿಯಲ್ ತಡೆಗೋಡೆ, ಚರಂಡಿಗಳು, ಗಡಿ ಗೋಡೆ ಮತ್ತು ಬೇಲಿ ಕಾಮಗಾರಿಗಳ ವಿನ್ಯಾಸ ಹಾಗೂ ನಿರ್ಮಾಣ ಮತ್ತು 185 ಮೀ. ಉದ್ದದ (ಚ. 24.200 ಕಿ.ಮೀ. ರಿಂದ ಚ. 24.385 ಕಿ.ಮೀ.ವರೆಗೆ) ಎಲಿವೇಟೆಡ್ ವಯಾಡಕ್ಟ್ ನಿರ್ಮಾಣ. ಇದಲ್ಲದೆ, ಬಿಎಸ್‌ಟಿಪಿ)ಯ ಕಾರಿಡಾರ್–2ರ ಭಾಗವಾಗಿ, ಯಶವಂತಪುರದಿಂದ ಚಿಕ್ಕಬಾಣಾವರದವರೆಗೆ ಐ.ಆರ್. ಕಾರಿಡಾರ್ ಹಾಗೂ ಇತರೆ ಸಂಬಂಧಿತ ಮೂಲಸೌಕರ್ಯ ಕಾಮಗಾರಿಗಳನ್ನು ಕೈಗೊಳ್ಳುವುದು. ಹಿಂದಿನ ಗುತ್ತಿಗೆದಾರರಿಂದ ಈಗಾಗಲೇ ನಿರ್ವಹಿಸಲಾದ ಕಾಮಗಾರಿಗಳಿಗೆ ಅನ್ವಯಿಸುವ ಸ್ಥಳಗಳಲ್ಲಿ ವಿನ್ಯಾಸದ ಪರಿಶೀಲನೆ ಮತ್ತು ಸ್ಥಿರತೆ ಪರಿಶೀಲನೆ ಕೈಗೊಳ್ಳುವುದು. (ನಿಲ್ದಾಣ ಕಟ್ಟಡಗಳನ್ನು ಹೊರತುಪಡಿಸಿ).ಈ ಕಾಮಗಾರಿಗೆ ಸಂಬಂಧಿಸಿದ LOA ಅನ್ನು 13/04/2026 ರಂದು ನೀಡಲಾಗಿದೆ. ಒಪ್ಪಂದದ ಮೊತ್ತವು ಎಲ್ಲಾ ತೆರಿಗೆಗಳು ಹಾಗೂ ಜಿಎಸ್‌ಟಿ ಸೇರಿದಂತೆ ₹106.29 ಕೋಟಿ ಆಗಿದೆ. ಈ ಪ್ಯಾಕೇಜ್‌ನ ಕಾಮಗಾರಿಗಳ ಪೂರ್ಣಗೊಳಿಸುವ ಅವಧಿಯು 18 ತಿಂಗಳುಗಳು ಆಗಿರುತ್ತದೆ.



ಇಆರ್‌ಎಸ್ ಬಾಕಿ ಕಾಮಗಾರಿ

### ಪ್ರಗತಿ

| ಸಂರಚನೆ | ವಿವರ | ಕೈಗೆತ್ತಿಕೊಳ್ಳಲಾಗಿರುವುದು | ಪೂರ್ಣಗೊಂಡಿರುವುದು | ಬಾಕಿ |
|---|---|---|---|---|
| ಇಆರ್‌ಎಸ್ | ರ್‍ಯಾಫ್ಟ್ (mtr) | 100 | 40 | 60 |
| | ಗೋಡೆ(mtr) | 500 | 320 | 180 |
| ಎಂಐಬಿಗಳು | ಎಂಐಬಿ (Nos) | 02 | 01 | 01 |
| ಆರ್‌ಯುಬಿಗಳು | ಆರ್‌ಯುಬಿ (Nos) | 02 | 01 | 01 |


ಇಆರ್‌ಎಸ್ ಕಾಮಗಾರಿ


ಎಂಐಬಿ 404ರ ಮೇಲ್ಭಾವಣಿ ಸ್ಲಾಬ್‌ನ ರೀಇನ್‌ಫೋರ್ಸ್‌ಮೆಂಟ್ ಕಾಮಗಾರಿ

## ಕಾರಿಡಾರ್–4

### ಅಲೈನ್‌ಮೆಂಟ್ ಕಾಮಗಾರಿಗಳು

ಕಾರಿಡಾರ್–4ರ ಅಲೈನ್‌ಮೆಂಟ್ ಕಾಮಗಾರಿಗಳಿಗೆ ಸಂಬಂಧಿಸಿದ ಪ್ಯಾಕೇಜ್–1 ಮತ್ತು ಪ್ಯಾಕೇಜ್–2ರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಟೆಂಡರ್ ಮೌಲ್ಯಮಾಪನ ಪ್ರಕ್ರಿಯೆಯು ಪ್ರಗತಿಯಲ್ಲಿದೆ. ಪ್ಯಾಕೇಜ್–3 ಮತ್ತು ಪ್ಯಾಕೇಜ್–4ರ ಟೆಂಡರ್‌ಗಳನ್ನು ಶೀಘ್ರದಲ್ಲೇ ಪ್ರಕಟಿಸಲಾಗುವುದು. ಹೀಲಲಿಗೆಯಿಂದ ಬಿನ್ನಿಪೇಟೆ/ಬೆನಿಗಾನಹಳ್ಳಿಯವರೆಗೆ 5 ಎಲ್‌ಸಿಗಳ ಕಾಮಗಾರಿಗಾಗಿ ಎರಡು ಪ್ಯಾಕೇಜ್‌ಗಳಲ್ಲಿ ಲೆವೆಲ್ ಕ್ರಾಸಿಂಗ್ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಮೌಲ್ಯಮಾಪನ ಪ್ರಕ್ರಿಯೆಯು ಪ್ರಗತಿಯಲ್ಲಿದೆ.

## ಕಾರಿಡಾರ್–4ಎ ನಿಲ್ದಾಣ ಪ್ಯಾಕೇಜ್

ಕಾರಿಡಾರ್–4ಎರಲ್ಲಿ ಒಟ್ಟು 9 ನಿಲ್ದಾಣಗಳಿದ್ದು, ಅವುಗಳಲ್ಲಿ 8 ಅಟ್–ಗ್ರೇಡ್ ನಿಲ್ದಾಣಗಳು ಮತ್ತು 1 ಎಲಿವೇಟೆಡ್ ನಿಲ್ದಾಣವಾಗಿದೆ. ಅಟ್–ಗ್ರೇಡ್ ನಿಲ್ದಾಣಗಳು ಹೀಲಲಿಗೆ, ಸಿಂಗೇನ ಅಗ್ರಹಾರ, ಹುಸ್ಕೂರು, ಅಂಬೇಡ್ಕರ್ ನಗರ, ಕಾರ್ಮೆಲಾರಂ, ಬೆಳ್ಳಂದೂರು, ದೊಡ್ಡನೆಕ್ಕುಂದಿ ಮತ್ತು ಕಗ್ಗದಾಸಪುರ ಆಗಿದ್ದು, ಮರಾಠಹಳ್ಳಿ ಎಲಿವೇಟೆಡ್ ನಿಲ್ದಾಣವಾಗಿದೆ.

**ಹುಸ್ಕೂರು ನಿಲ್ದಾಣ:** ಮುಖ್ಯ ನಿಲ್ದಾಣ ಬಾಕ್ಸ್‌ಗೆ ಸಂಬಂಧಿಸಿದ ಫೌಂಡೇಶನ್ ಮತ್ತು ಕಾನ್ಕೋರ್ಸ್ ಮಟ್ಟದವರೆಗಿನ ಪಿಯರ್ ಕಾಮಗಾರಿ ಪೂರ್ಣಗೊಂಡಿದೆ. ಒಟ್ಟು 13 ಪೋರ್ಟಲ್ ಬೀಮ್‌ಗಳಲ್ಲಿ 11 ಪೂರ್ಣಗೊಂಡಿವೆ. ಒಟ್ಟು 88 ಟಿ–ಗರ್ಡರ್‌ಗಳಲ್ಲಿ 3 ಟಿ–ಗರ್ಡರ್‌ಗಳ ಅಳವಡಿಕೆ ಪೂರ್ಣಗೊಂಡಿದೆ.

**ಹೀಲಲಿಗೆ ನಿಲ್ದಾಣ:** ಒಟ್ಟು 124 ಪೈಲ್‌ಗಳಲ್ಲಿ 76 ಪೈಲ್‌ಗಳ ಕಾಮಗಾರಿ ಪೂರ್ಣಗೊಂಡಿದೆ. ಒಟ್ಟು 28 ಪೈಲ್ ಕ್ಯಾಪ್‌ಗಳಲ್ಲಿ 3 ಪೂರ್ಣಗೊಂಡಿವೆ.

**ಕಗ್ಗದಾಸಪುರ ನಿಲ್ದಾಣ:** ರಾಫ್ಟ್ ಕಾಂಕ್ರೀಟ್ ಕಾಮಗಾರಿಯ ಶೇ.56ರಷ್ಟು ಪೂರ್ಣಗೊಂಡಿದೆ. ಒಟ್ಟು 462ಆರ್‌ಎಂಟಿ ತಡೆಗೋಡೆಗಳಲ್ಲಿ 180 ಆರ್‌ಎಂಟಿ ಕಾಮಗಾರಿ ಪೂರ್ಣಗೊಂಡಿದೆ.

**ಬೆಳ್ಳಂದೂರು ನಿಲ್ದಾಣ:** ಫೌಂಡೇಶನ್ ಕಾಮಗಾರಿ ಹಾಗೂ ಗ್ರೌಂಡ್ ಲೆವೆಲ್‌ವರೆಗಿನ ಪಿಯರ್ ಕಾಮಗಾರಿ ಪೂರ್ಣಗೊಂಡಿದೆ. ಒಟ್ಟು 26 ಪಿಯರ್‌ಗಳಲ್ಲಿ 18 ಪಿಯರ್‌ಗಳ ಅಂತಿಮ ಲಿಫ್ಟ್‌ವರೆಗಿನ ಕಾಂಕ್ರೀಟ್ ಕಾಮಗಾರಿ ಪೂರ್ಣಗೊಂಡಿದೆ. 2.4 ಮೀ. ಎತ್ತರದವರೆಗೆ ಒಟ್ಟು 460 ಖಟಣ ತಡೆಗೋಡೆಗಳಲ್ಲಿ 446ಆರ್‌ಎಂಟಿ ಕಾಮಗಾರಿ ಪೂರ್ಣಗೊಂಡಿದೆ. ಅಂತಿಮ ಲಿಫ್ಟ್‌ವರೆಗೆ ಒಟ್ಟು 460ಆರ್‌ಎಂಟಿ ತಡೆಗೋಡೆಗಳಲ್ಲಿ 282ಆರ್‌ಎಂಟಿ ಕಾಮಗಾರಿ ಪೂರ್ಣಗೊಂಡಿದೆ.

**ಕಾರ್ಮೆಲಾರಂ ನಿಲ್ದಾಣ:** ಒಟ್ಟು 12 ಗ್ರಿಡ್‌ಗಳಲ್ಲಿ 6 ಗ್ರಿಡ್‌ಗಳ ಪಿಸಿಸಿ ಕಾಮಗಾರಿ ಪೂರ್ಣಗೊಂಡಿದೆ. ಒಟ್ಟು 12 ಗ್ರಿಡ್‌ಗಳಲ್ಲಿ 1 ಗ್ರಿಡ್‌ನ ರಾಫ್ಟ್ ಕಾಂಕ್ರೀಟ್ ಕಾಮಗಾರಿ ಪೂರ್ಣಗೊಂಡಿದೆ.

**ಸಿಂಗೇನ ಅಗ್ರಹಾರ ನಿಲ್ದಾಣ:** ಒಟ್ಟು 12 ಗ್ರಿಡ್‌ಗಳಲ್ಲಿ 8 ಗ್ರಿಡ್‌ಗಳ ಕಅಅ ಕಾಮಗಾರಿ ಪೂರ್ಣಗೊಂಡಿದೆ. ಒಟ್ಟು 12 ಗ್ರಿಡ್‌ಗಳಲ್ಲಿ 8 ಗ್ರಿಡ್‌ಗಳ ರಾಫ್ಟ್ ಕಾಂಕ್ರೀಟ್ ಕಾಮಗಾರಿ ಪೂರ್ಣಗೊಂಡಿದೆ.

**ಅಂಬೇಡ್ಕರ್ ನಗರ ನಿಲ್ದಾಣ:** ಒಟ್ಟು 12 ಗ್ರಿಡ್‌ಗಳಲ್ಲಿ 12 ಗ್ರಿಡ್‌ಗಳ ನಿಲ್ದಾಣ ರಾಫ್ಟ್ ಕಾಂಕ್ರೀಟ್ ಕಾಮಗಾರಿ ಪೂರ್ಣಗೊಂಡಿದೆ. ಒಟ್ಟು 26 ಪಿಯರ್‌ಗಳಲ್ಲಿ 18 ಪಿಯರ್‌ಗಳ ಕಾನ್ಕೋರ್ಸ್ ಮಟ್ಟದವರೆಗಿನ ಕಾಮಗಾರಿ ಪೂರ್ಣಗೊಂಡಿದೆ.

**ಕಾಸ್ಟಿಂಗ್ ಯಾರ್ಡ್:** 16.09.2026ರ ವೇಳೆಗೆ ಒಟ್ಟು 66 ಪ್ರೀಕಾಸ್ಟ್ I/T/L ಗರ್ಡರ್‌ಗಳನ್ನು ಎರಕಹೊಯ್ದು ಸಿದ್ಧಪಡಿಸಲಾಗಿದೆ.

ಹುಸ್ಕೂರು ನಿಲ್ದಾಣ □ ವೈಮಾನಿಕ ನೋಟ ಮತ್ತು ನಿಲ್ದಾಣದ ಕಾಲಮ್‌ಗಳ ನೋಟ




ಹೀಲಲಿಗೆ ನಿಲ್ದಾಣ – ಪೈಲಿಂಗ್ ಕಾಮಗಾರಿ




ಕಗ್ಗದಾಸಪುರ ನಿಲ್ದಾಣ – ರಾಫ್ಟ್ ಕಾಮಗಾರಿ




ಬೆಳ್ಳಂದೂರು ನಿಲ್ದಾಣ





Follow us on
Follow us on

ಅಂಬೇಡ್ಕರ್ ನಗರ ನಿಲ್ದಾಣ – ನಿಲ್ದಾಣದ ವೈಮಾನಿಕ ನೋಟ





ಕಾರ್ಮೆಲಾರಂ ನಿಲ್ದಾಣ – ನಿಲ್ದಾಣದ ವೈಮಾನಿಕ ನೋಟ ಮತ್ತು ರಾಫ್ಟ್ ಕಾಮಗಾರಿ





ಸಿಂಗೇನ ಅಗ್ರಹಾರ ನಿಲ್ದಾಣ – ನಿಲ್ದಾಣದ ರಾಫ್ಟ್ ಮತ್ತು ಕಾಲಮ್ ಕಾಮಗಾರಿ





ಕಾಸ್ಟಿಂಗ್ ಯಾರ್ಡ್ – ಗರ್ಡರ್‌ಗಳ ಎರಕ ಹೊಯ್ಯುವ ಕಾಮಗಾರಿ ಪ್ರಗತಿಯಲ್ಲಿದೆ





## ಕಾರಿಡಾರ್–4ಬಿ ನಿಲ್ದಾಣ ಪ್ಯಾಕೇಜ್

ಕಾರಿಡಾರ್–4ಬಿ ರಲ್ಲಿ ಒಟ್ಟು 9 ನಿಲ್ದಾಣಗಳಿದ್ದು, ಅವುಗಳಲ್ಲಿ 6 ಅಟ್–ಗ್ರೇಡ್ ನಿಲ್ದಾಣಗಳು ಮತ್ತು 3 ಎಲಿವೇಟೆಡ್ ನಿಲ್ದಾಣಗಳು ಆಗಿವೆ. ಅಟ್–ಗ್ರೇಡ್ ನಿಲ್ದಾಣಗಳು ಚನ್ನಸಂದ್ರ, ಹೊರಮಾವು, ಥಣಿಸಂದ್ರ, ಜಕ್ಕೂರು, ಮುದ್ದೇನಹಳ್ಳಿ ಮತ್ತು ರಾಜಾನುಕುಂಟೆ ಆಗಿದ್ದು, ಎಲಿವೇಟೆಡ್ ನಿಲ್ದಾಣಗಳು ಹೆಣ್ಣೂರು, ಆರ್.ಕೆ. ಹೆಗಡೆ ನಗರ ಮತ್ತು ಯಲಹಂಕ ಆಗಿವೆ.

**ರಾಜಾನುಕುಂಟೆ ನಿಲ್ದಾಣ:** ಒಟ್ಟು 247 ಮೀ. ತಡೆಗೋಡೆ ಕಾಮಗಾರಿ ಪೈಕಿ 247 ಮೀ. ಕಾಮಗಾರಿ ಪೂರ್ಣಗೊಂಡಿದೆ. ರಾಫ್ಟ್ ಫೌಂಡೇಶನ್ ಕಾಂಕ್ರೀಟ್ ಕಾಮಗಾರಿ ಶೇ.100ರಷ್ಟು ಪೂರ್ಣಗೊಂಡಿದೆ. ಒಟ್ಟು 26 ಪಿಯರ್‌ಗಳಲ್ಲಿ 19 ಪಿಯರ್‌ಗಳ ಕಾಮಗಾರಿ ಪೂರ್ಣಗೊಂಡಿದೆ. ಪೋರ್ಟಲ್ ಬೀಮ್ ಕಾಮಗಾರಿ ಪ್ರಗತಿಯಲ್ಲಿದೆ.

**ಜಕ್ಕೂರು ನಿಲ್ದಾಣ:** ಪೈಲಿಂಗ್ ಕಾಮಗಾರಿ ಶೇ.100ರಷ್ಟು ಪೂರ್ಣಗೊಂಡಿದೆ. ಒಟ್ಟು 26 ಪೈಲ್ ಕ್ಯಾಪ್‌ಗಳಲ್ಲಿ 4 ಪೂರ್ಣಗೊಂಡಿವೆ. ಒಟ್ಟು 148 ಫೌಂಡೇಶನ್ ಬೀಮ್‌ಗಳಲ್ಲಿ 22 ಪೂರ್ಣಗೊಂಡಿವೆ.

**ಚನ್ನಸಂದ್ರ ನಿಲ್ದಾಣ:** ಒಟ್ಟು 12 ಗ್ರಿಡ್‌ಗಳಲ್ಲಿ 10 ಗ್ರಿಡ್‌ಗಳ ರಾಫ್ಟ್ ಕಾಂಕ್ರೀಟ್ ಕಾಮಗಾರಿ ಪೂರ್ಣಗೊಂಡಿದೆ. ಒಟ್ಟು 26 ಪಿಯರ್‌ಗಳಲ್ಲಿ 12 ಪಿಯರ್‌ಗಳ ಕಾಮಗಾರಿ ಪೂರ್ಣಗೊಂಡಿದೆ. ಪೋರ್ಟಲ್ ಬೀಮ್ ಕಾಮಗಾರಿ ಪ್ರಗತಿಯಲ್ಲಿದೆ.

**ಥಣಿಸಂದ್ರ ನಿಲ್ದಾಣ:** ತಡೆಗೋಡೆ ಕಾಮಗಾರಿ ಶೇ.100ರಷ್ಟು ಪೂರ್ಣಗೊಂಡಿದೆ. ಒಟ್ಟು 12 ಗ್ರಿಡ್‌ಗಳಲ್ಲಿ 3 ಗ್ರಿಡ್‌ಗಳ ರಾಫ್ಟ್ ಕಾಂಕ್ರೀಟ್ ಕಾಮಗಾರಿ ಪೂರ್ಣಗೊಂಡಿದೆ. ಪಿಯರ್ ಕಾಮಗಾರಿ ಪ್ರಗತಿಯಲ್ಲಿದೆ.

**ಮುದ್ದೇನಹಳ್ಳಿ ನಿಲ್ದಾಣ:** ಜಿಟಿಐ ಕಾಮಗಾರಿ ಪೂರ್ಣಗೊಂಡಿದೆ. ಅಪ್ರೋಚ್ ರಸ್ತೆ ಮತ್ತು ಬ್ಯಾರಿಕೇಡಿಂಗ್ ಕಾಮಗಾರಿಗಳು ಪ್ರಗತಿಯಲ್ಲಿವೆ.

**ಹೊರಮಾವು ನಿಲ್ದಾಣ:** ಒಟ್ಟು 12 ಗ್ರಿಡ್‌ಗಳಲ್ಲಿ 1 ಗ್ರಿಡ್‌ನ ರಾಫ್ಟ್ ಕಾಂಕ್ರೀಟ್ ಕಾಮಗಾರಿ ಪೂರ್ಣಗೊಂಡಿದೆ. ರಾಫ್ಟ್ ಕಾಮಗಾರಿ ಪ್ರಗತಿಯಲ್ಲಿದೆ.

ಚನ್ನಸಂದ್ರ ನಿಲ್ದಾಣದ ವೈಮಾನಿಕ ನೋಟ



ಹೊರಮಾವು ನಿಲ್ದಾಣ – ರಾಫ್ಟ್ ಕಾಮಗಾರಿಗಳು



ಜಕ್ಕೂರು ನಿಲ್ದಾಣದ ವೈಮಾನಿಕ ನೋಟ



ರಾಜಾನುಕುಂಟೆ ನಿಲ್ದಾಣ – ಕಾಲಮ್ ಕಾಮಗಾರಿಗಳು



ಥಣಿಸಂದ್ರ ನಿಲ್ದಾಣ – ರಾಫ್ಟ್ ಕಾಮಗಾರಿಗಳು



ಮುದ್ದೇನಹಳ್ಳಿ ನಿಲ್ದಾಣ – ಬ್ಯಾರಿಕೇಡಿಂಗ್ ಕಾಮಗಾರಿಗಳು



## ಚನ್ನಸಂದ್ರ ಬಾಕ್ಸ್ ಕಾಮಗಾರಿಗಳು

- ಚನ್ನಸಂದ್ರ ಬಾಕ್ಸ್‌ನ 358 ಮೀ. ಪೈಕಿ 135 ಮೀ. (24+242 ರಿಂದ 24+377) ರಾಫ್ಟ್ ಕಾಮಗಾರಿ ಪೂರ್ಣಗೊಂಡಿದೆ.
- 45 ಮೀ. ಉದ್ದದ 1ನೇ ಸ್ಪ್ಯಾನ್ (24+242 ರಿಂದ 24+287) ಬಾಕ್ಸ್‌ನ ಸೈಡ್ ವಾಲ್‌ಗಳು ಮತ್ತು ಟಾಪ್ ಸ್ಲ್ಯಾಬ್‌ನ ಕಾಂಕ್ರೀಟಿಂಗ್ ಕಾಮಗಾರಿ ಪೂರ್ಣಗೊಂಡಿದೆ.
- 45 ಮೀ. ಉದ್ದದ 2ನೇ ಸ್ಪ್ಯಾನ್ (24+287 ರಿಂದ 24+332) ಬಾಕ್ಸ್‌ನ ಎರಡೂ ಬದಿಯ ಗೋಡೆಗಳ ಕಾಂಕ್ರೀಟಿಂಗ್ ಕಾಮಗಾರಿ ಪೂರ್ಣಗೊಂಡಿದ್ದು, ಟಾಪ್ ಸ್ಲ್ಯಾಬ್ ಕಾಂಕ್ರೀಟಿಂಗ್‌ಗೆ ಸಿದ್ಧವಾಗಿದೆ.
- 45 ಮೀ. ಉದ್ದದ 3ನೇ ಸ್ಪ್ಯಾನ್ (24+332 ರಿಂದ 24+377) ಬಾಕ್ಸ್‌ನ ಎರಡೂ ಬದಿಯ ಗೋಡೆಗಳ ಕಾಂಕ್ರೀಟಿಂಗ್ ಕಾಮಗಾರಿ ಪೂರ್ಣಗೊಂಡಿದ್ದು, ಟಾಪ್ ಸ್ಲ್ಯಾಬ್‌ನ ರೀಇನ್‌ಫೋರ್ಸ್‌ಮೆಂಟ್ ಕಾಮಗಾರಿಗಾಗಿ ಸ್ಟೇಜಿಂಗ್ ಅಳವಡಿಕೆ ಪ್ರಗತಿಯಲ್ಲಿದೆ.
- ಒಟ್ಟು 202 ಪೈಲ್‌ಗಳ ಪೈಕಿ 76 ಪೈಲ್‌ಗಳ ಕಾಮಗಾರಿ ಪೂರ್ಣಗೊಂಡಿದೆ.



45 ಮೀ. ಉದ್ದದ 3ನೇ ಸ್ಪ್ಯಾನ್‌ನ ಟಾಪ್ ಸ್ಲ್ಯಾಬ್‌ನ ರೀಇನ್‌ಫೋರ್ಸ್‌ಮೆಂಟ್ ಕಾಮಗಾರಿಗಾಗಿ ಸ್ಟೇಜಿಂಗ್ ಅಳವಡಿಕೆ ಕಾಮಗಾರಿ ಪ್ರಗತಿಯಲ್ಲಿದೆ.



45 ಮೀ. ಉದ್ದದ 1ನೇ ಸ್ಪ್ಯಾನ್‌ನ ಬಾಕ್ ಟಾಪ್ ಸ್ಲ್ಯಾಬ್ ಕಾಂಕ್ರೀಟಿಂಗ್ ಕಾಮಗಾರಿ ಪೂರ್ಣಗೊಂಡಿದ್ದು, 45 ಮೀ. ಉದ್ದದ 2ನೇ ಸ್ಪ್ಯಾನ್‌ನ ಟಾಪ್ ಸ್ಲ್ಯಾಬ್ ಕಾಂಕ್ರೀಟಿಂಗ್‌ಗೆ ಸಿದ್ಧವಾಗಿದೆ.

## ಕಾರಿಡಾರ್ –1

**ಕೆಎಸ್‌ಆರ್–ದೇವನಹಳ್ಳಿ ವಿಭಾಗದಲ್ಲಿ, ಭೂಸ್ವಾಧೀನ ಪ್ರಕ್ರಿಯೆಯು ಅಂತಿಮ ಹಂತದಲ್ಲಿದ್ದು, ಜೆಎಂಸಿ ಅಂತಿಮಗೊಳಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ.**

ಕಾರಿಡಾರ್–1 ಅಲೈನ್‌ಮೆಂಟ್ ಭಾರತೀಯ ರೈಲ್ವೆಯ ವತಿಯಿಂದ ಪುನರ್‌ಅಭಿವೃದ್ಧಿಗೊಳಿಸಲಾಗುತ್ತಿರುವ ಯಶವಂತಪುರ ರೈಲು ನಿಲ್ದಾಣದ ಮುಂಭಾಗದಲ್ಲಿ ಹಾದುಹೋಗುತ್ತದೆ. ಉಪನಗರ ರೈಲು ಮಾರ್ಗದ ರೇಖಾನ್ಯಾಸವು ಎಲಿವೇಟೆಡ್ ಆಗಿದ್ದು, ಭಾರತೀಯ ರೈಲ್ವೆ ನಿಲ್ದಾಣದ ಸರ್ಕ್ಯುಲೇಟಿಂಗ್ ಪ್ರದೇಶ ಹಾಗೂ ಬಿಎಸ್‌ಟಿಪಿ ಯಶವಂತಪುರ ನಿಲ್ದಾಣದ ಮೂಲಕ ಹಾದುಹೋಗುತ್ತದೆ. ಭಾರತೀಯ ರೈಲ್ವೆಯು ಯಶವಂತಪುರ ನಿಲ್ದಾಣದ ಪುನರ್‌ಅಭಿವೃದ್ಧಿ ಕಾಮಗಾರಿಯನ್ನು ಪೂರ್ಣಗೊಳಿಸಿದ ನಂತರ ಕಾರಿಡಾರ್–1ರ ವಯಾಡಕ್ಟ್ ನಿರ್ಮಾಣವು ಸವಾಲಿನದ್ದಾಗಲಿದೆ, ಏಕೆಂದರೆ ಪ್ರಸ್ತಾವಿತ ಬಿಎಸ್‌ಟಿಪಿ ಅಲೈನ್‌ಮೆಂಟ್ ಪುನರ್‌ಅಭಿವೃದ್ಧಿಗೊಳಿಸಲಾದ ಮೂಲಸೌಕರ್ಯದ ಮೇಲ್ಭಾಗದಲ್ಲಿ ಹಾದುಹೋಗುತ್ತದೆ. ಆದ್ದರಿಂದ, ಈ ವಿಭಾಗದಲ್ಲಿ ಸುಮಾರು 500 ಮೀಟರ್ ಉದ್ದದ ಕಾರಿಡಾರ್–1ರ ಭಾಗವನ್ನು ರೈಲ್ವೆ ಭೂಮಿಯೊಳಗೆ ಶಾಶ್ವತ ವಯಾಡಕ್ಟ್ ರಚನೆಯಾಗಿ ನಿರ್ಮಿಸಲು ಪರಿಗಣಿಸಲಾಗಿದೆ. ಇದು ಮುಂಬರುವ ದಿನಗಳಲ್ಲಿ ಕೆಎಸ್‌ಆರ್‌ನಿಂದ ದೇವನಹಳ್ಳಿವರೆಗೆ ಇರುವ ಕಾರಿಡಾರ್–1 ಅಲೈನ್‌ಮೆಂಟ್‌ಗೆ ಸಂಪರ್ಕ ಕಲ್ಪಿಸಲಿದೆ. ಇದಕ್ಕೆ ಅನುಗುಣವಾಗಿ, M/s CEM India ಗುತ್ತಿಗೆದಾರರನ್ನು ಈ ಕಾಮಗಾರಿಗಳನ್ನು ಕೈಗೊಳ್ಳಲು ನಿಯೋಜಿಸಲಾಗಿದ್ದು, ಪ್ರಸ್ತುತ ನಡೆಯುತ್ತಿರುವ ಸಿ2 ನಿಲ್ದಾಣದ ಕಾಮಗಾರಿಗಳ ಜೊತೆಗೆ ಮೇಲ್ಕಂಡ ಕಾಮಗಾರಿಗಳನ್ನೂ

## ಕಾರಿಡಾರ್ –3

ಎಸ್‌ಡಬ್ಲ್ಯೂಆರ್ ವತಿಯಿಂದ ಡಿಸೆಂಬರ್ 2025ರಲ್ಲಿ ಅಲೈನ್‌ಮೆಂಟ್‌ಗೆ ಅನುಮೋದನೆ ನೀಡಲಾಗಿದೆ. ಅದರಂತೆ, ಅನುಮೋದಿತ ಅಲೈನ್‌ಮೆಂಟ್‌ನ ಪ್ರಕಾರ ಕೆಂಗೇರಿಯಿಂದ ವೈಟ್‌ಫೀಲ್ಡ್‌ವರೆಗೆ ಸಂಪರ್ಕ ಕಲ್ಪಿಸಲು ಅಗತ್ಯವಿರುವ ಭೂಮಿಯ ಅವಶ್ಯಕತೆಯನ್ನು ಅಂತಿಮಗೊಳಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

## ದ್ವಿಪಥೀಕರಣ ಕಾಮಗಾರಿಗಳ ಪ್ರಗತಿ

### ಬೈಯಪ್ಪನಹಳ್ಳಿ–ಹೊಸೂರು ದ್ವಿಪಥೀಕರಣ ಯೋಜನೆ (48.00 ಕಿ.ಮೀ.)

| ಸಂಪೂರ್ಣ ಯೋಜನೆಯ ಸಂಕ್ಷಿಪ್ತ ನೋಟ | |
|---|---|
| ಯೋಜನೆ ಸೇರ್ಪಡೆಯಾದ ವರ್ಷ | 2018–19 |
| ಅಂತಿಮ ಅನುಮೋದನೆಯ ತಿಂಗಳು ಮತ್ತು ವರ್ಷ | ಆಗಸ್ಟ್ 2018 |
| ಯೋಜನೆಯು ಒಳಪಡುವ ರೈಲ್ವೆ ವಿಭಾಗ | ನೈಋತ್ಯ ರೈಲ್ವೆ (SWR) |
| ಕಾರ್ಯಗತಗೊಳಿಸುವ ಸಂಸ್ಥೆ | ಕೆ–ರೈಡ್ (ಜೂನ್ 2020ರಿಂದ) |
| ಆರ್‌ಓಆರ್ (+ %) | +15.67% |
| ಸಂಪೂರ್ಣ ಯೋಜನೆಯ ಉದ್ದ (ಕಿ.ಮೀ.) | 48 (ಕಿ.ಮೀ.) |
| ಮೂಲ ಮಂಜೂರಾದ ವೆಚ್ಚ (ಕೋಟಿ ರೂ.ಗಳಲ್ಲಿ) | ₹498.73ಕೋಟಿ (50:50)(GoK : MoR) |
| ಪರಿಷ್ಕೃತ ಅಂದಾಜು ಅಗತ್ಯವಿದೆಯೇ? (ಹೌದು / ಇಲ್ಲ ಮತ್ತು ಟಿಡಿಸಿ) | ಹೌದು. |
| ಯೋಜನೆಯ ಇತ್ತೀಚಿನ ನಿರೀಕ್ಷಿತ ವೆಚ್ಚ (ಕೋಟಿ ರೂ.ಗಳಲ್ಲಿ) | ಪರಿಷ್ಕೃತ ವೆಚ್ಚ ₹1,116 ಕೋಟಿ – ನೈಋತ್ಯ ರೈಲ್ವೆಗೆ ಸಲ್ಲಿಸಲಾಗಿದೆ. |
| ಸಂಪೂರ್ಣ ಯೋಜನೆಯ ಆರ್ಥಿಕ ಪ್ರಗತಿ (%) | ಮೂಲ ಮಂಜೂರಾದ ವೆಚ್ಚಕ್ಕೆ ಹೋಲಿಸಿದರೆ 145% |
| ಸಂಪೂರ್ಣ ಯೋಜನೆಯ ಭೌತಿಕ ಪ್ರಗತಿ (%) | 88% |
| ಈಗಾಗಲೇ ಕಾರ್ಯಾರಂಭಗೊಂಡಿರುವ ಯೋಜನೆಯ ಉದ್ದ (ಕಿ.ಮೀ.) | 14.00 ಕಿ.ಮೀ. |
| ಸಂಪೂರ್ಣ ಯೋಜನೆಯ ಸಂಭಾವ್ಯ ಟಿಡಿಸಿ (ತಿಂಗಳು ಮತ್ತು ವರ್ಷ) | ಮಾರ್ಚ್ 2027 |

**ಕಾರ್ಯಾರಂಭಗೊಂಡ ವಿಭಾಗಗಳು**

| ಕ್ರ. ಸಂ. | ವಿಭಾಗ | ಕಾರ್ಯಾರಂಭಗೊಂಡ ದಿನಾಂಕ |
|---|---|---|
| 1 | ಹೀಲಲಿಗೆ – ಕಾರ್ಮೆಲಾರಂ (10.5 ಕಿ.ಮೀ.) | ಕಾರ್ಯಾರಂಭಗೊಂಡ ದಿನಾಂಕ: 20 ಫೆಬ್ರವರಿ 2023 |
| 2 | ಕಾರ್ಮೆಲಾರಂ – ಬೆಳ್ಳಂದೂರು ರಸ್ತೆ (3.5 ಕಿ.ಮೀ.) ಹುಸ್ಕೂರು ಹೊಸ ಯಾರ್ಡ್ ಸೇರಿದಂತೆ | ಕಾರ್ಯಾರಂಭಗೊಂಡ ದಿನಾಂಕ: 25 ನವೆಂಬರ್ 2025 |




**ಕಾರ್ಯಾರಂಭಕ್ಕೆ ನಿಗದಿಪಡಿಸಲಾದ ವಿಭಾಗಗಳು**

| ಕ್ರ. ಸಂ. | ಹಣಕಾಸು ವರ್ಷ | ವಿಭಾಗ | ಉದ್ದ (ಕಿ.ಮೀ.) | ಕಾರ್ಯಾರಂಭದ ಗುರಿ |
|---|---|---|---|---|
| 1 | 2026–27 | ಬೈಯಪ್ಪನಹಳ್ಳಿ – ಬೆಳ್ಳಂದೂರು ರಸ್ತೆ | 9.7 | ಮಾರ್ಚ್ 2027 |
| 2 | | ಹೀಲಲಿಗೆ – ಆನೇಕಲ್ ರಸ್ತೆ | 10.0 | ನವೆಂಬರ್ 2026 |
| 3 | | ಆನೇಕಲ್ ರಸ್ತೆ – ಮಾರನಾಯಕನಹಳ್ಳಿ | 6.9 | ನವೆಂಬರ್ 2026 |
| 4 | | ಮಾರನಾಯಕನಹಳ್ಳಿ– ಹೊಸೂರು | 7.6 | ನವೆಂಬರ್ 2026 |

### ಜೂನ್ 2026ರವರೆಗಿನ ಕಾಮಗಾರಿ ಪ್ರಗತಿ (BYPL-HSRA)

| ಕ್ರ. ಸಂ. | ವಿವರ | ಯೂನಿಟ್ | ಒಟ್ಟು ವ್ಯಾಪ್ತಿ | ಒಟ್ಟು ಪ್ರಗತಿ | % ಪ್ರಗತಿ |
|---|---|---|---|---|---|
| 1 | ಅರ್ಥ್ ವರ್ಕ್ | Cum | 1152000 | 1150000 | 99% |
| 2 | ಬ್ಲಾಕೆಟಿಂಗ್ | Cum | 155500 | 147500 | 96% |
| 3 | ಸಣ್ಣ ಸೇತುವೆ | No. | 101 | 99 | 98% |
| 4 | ಆರ್‌ಯುಬಿಗಳು | No. | 15 | 15 | 100% |
| 5 | ದೊಡ್ಡ ಸೇತುವೆ/ಒಹೆಚ್‌ಪಿ | No. | 7 | 5 | 85% |
| 6 | ಆರ್‌ಓಬಿ | No. | 1 | 0 | 80% |
| 7 | ನಿಲ್ದಾಣ ಕಟ್ಟಡ | No. | 4 | 4 | 100% |
| 8 | ಬ್ಯಾಲಸ್ಟ್ ಸರಬರಾಜು | Cum | 140500 | 96300 | 68% |
| 9 | ಹಳಿ ಜೋಡಣೆ | Km | 48 | 28 | 60% |
| 10 | S&T ಕಾಮಗಾರಿಗಳು | No. | 6 | 4 | 70% |
| 11 | TRD ಕಾಮಗಾರಿಗಳು | Km | 48 | 26 | 55% |
| 12 | ಕಾರ್ಯಾರಂಭ | Km | 48 | 14 | 30% |


Follow us on



MNKH–HSRA ವಿಭಾಗದ ನಡುವೆ ಟ್ರ್ಯಾಕ್ ಲಿಂಕಿಂಗ್ ಕಾಮಗಾರಿ ಪ್ರಗತಿಯಲ್ಲಿದೆ.



ಬಿಆರ್ ಸಂ. 470: ಎರಡೂ ಗರ್ಡರ್‌ಗಳ ಜೋಡಣೆ ಕಾಮಗಾರಿ



ಬಿಆರ್ ಸಂ. 470: ಗರ್ಡರ್‌ಗಳ ಲಾಂಚಿಂಗ್‌ಗಾಗಿ ತಾತ್ಕಾಲಿಕ ಕಾಮಗಾರಿಗಳು



HSRAಯಲ್ಲಿ S&T ಸ್ಟೋರ್ ಕಮ್ ಕಚೇರಿ ಕಟ್ಟಡದ ನಿರ್ಮಾಣ ಕಾಮಗಾರಿ

## ಯಶವಂತಪುರ–ಚನ್ನಸಂದ್ರ ಡಿ/ಎಲ್ (21.70 ಕಿ.ಮೀ.)

| ಸಂಪೂರ್ಣ ಯೋಜನೆಯ ಸಂಕ್ಷಿಪ್ತ ನೋಟ | |
|---|---|
| ಯೋಜನೆ ಸೇರ್ಪಡೆಯಾದ ವರ್ಷ | 2018–19 |
| ಅಂತಿಮ ಅನುಮೋದನೆಯ ತಿಂಗಳು ಮತ್ತು ವರ್ಷ | ನವೆಂಬರ್ 2018 |
| ಯೋಜನೆಯು ಒಳಪಡುವ ರೈಲ್ವೆ ವಿಭಾಗ | ನೈಋತ್ಯ ರೈಲ್ವೆ (SWR) |
| ಕಾರ್ಯಗತಗೊಳಿಸುವ ಸಂಸ್ಥೆ | ಕ–ರೈಡ್ (ಜೂನ್ 2020ರಿಂದ) |
| ಸಂಪೂರ್ಣ ಯೋಜನೆಯ ಉದ್ದ (ಕಿ.ಮೀ.) | 21.70 ಕಿ.ಮೀ. |
| ಮೂಲ ಮತ್ತು ಪರಿಷ್ಕೃತ ಮಂಜೂರಾದ ವೆಚ್ಚ (ಕೋಟಿ ರೂ.ಗಳಲ್ಲಿ) ಹಾಗೂ ಮಂಜೂರಾತಿಯ ದಿನಾಂಕ | ₹314.10 ಕೋಟಿ ಮಂಜೂರಾಗಿದೆ. ಪರಿಷ್ಕೃತ ವೆಚ್ಚ: ₹709 ಕೋಟಿ SWRಗೆ ಸಲ್ಲಿಸಲಾಗಿದೆ. |
| ವೆಚ್ಚ ಹಂಚಿಕೆ ಮಾದರಿ | (50:50) (GoK : MoR) |
| ಯೋಜನೆಯ ಇತ್ತೀಚಿನ ನಿರೀಕ್ಷಿತ ವೆಚ್ಚ (ಕೋಟಿ ರೂ.ಗಳಲ್ಲಿ) | ₹314.10 ಕೋಟಿ |
| ಸಂಪೂರ್ಣ ಯೋಜನೆಯ ಆರ್ಥಿಕ ಪ್ರಗತಿ (%) | 59% |
| ಸಂಪೂರ್ಣ ಯೋಜನೆಯ ಭೌತಿಕ ಪ್ರಗತಿ (%) | 61% |
| ಸಂಪೂರ್ಣ ಯೋಜನೆಯ ಸಂಭಾವ್ಯ ಟಿಡಿಸಿ (ತಿಂಗಳು ಮತ್ತು ವರ್ಷ) | ಮಾರ್ಚ್ 2027 |




| ಕಾರ್ಯಾರಂಭಕ್ಕೆ ನಿಗದಿಪಡಿಸಲಾದ ವಿಭಾಗಗಳು | | | | |
|---|---|---|---|---|
| ಕ್ರ. ಸಂ. | ಹಣಕಾಸು ವರ್ಷ | ವಿಭಾಗ | ಉದ್ದ (ಕಿ.ಮೀ.) | ಕಾರ್ಯಾರಂಭದ ಗುರಿ |
| 1 | 2025-26 | ಯಶವಂತಪುರ–ಯಶವಂತಪುರ ಬೈಪಾಸ್–ಲೊಟ್ಟೆಗೊಲ್ಲಹಳ್ಳಿ–ಹೆಬ್ಬಾಳ + YPR ಬೈಪಾಸ್–LOGH 4ಲೈನ್ | 8.1 + 2.3 = 10.4 Km | ಡಿಸೆಂಬರ್ 2026 |
| 2 | 2026-27 | ಹೆಬ್ಬಾಳ - ಬಾಣಸವಾಡಿ - ಬೈಯಪ್ಪನಹಳ್ಳಿ - ಎ ಪ್ಯಾನೆಲ್ | 11.6 | ಮಾರ್ಚ್ 2027 |

## ಜೂನ್ 2026ರವರೆಗಿನ ಕಾಮಗಾರಿ ಪ್ರಗತಿ (YPR–CSDR)

| ಕ್ರ. ಸಂ. | ವಿವರ | ಯೂನಿಟ್ | ಒಟ್ಟು ವ್ಯಾಪ್ತಿ | ಒಟ್ಟು ಪ್ರಗತಿ | % ಪ್ರಗತಿ |
|---|---|---|---|---|---|
| 1 | ಅರ್ಥ್ ವರ್ಕ್ | Cum | 191000 | 184546 | 96.62% |
| 2 | ಬ್ಲಾಕೇಟಿಂಗ್ | Cum | 62500 | 27004 | 43.21% |
| 3 | ರಿಟೈನಿಂಗ್ ಗೋಡೆ/ ಕಾಂಪೌಂಡ್ ಗೋಡೆ | RM | 6150 | 5250 | 85.36% |
| 4 | ಸಣ್ಣ ಸೇತುವೆ | Nos. | 34 | 27 | 79.41% |
| 5 | ದೊಡ್ಡ ಸೇತುವೆ | Nos. | 2 | ಪ್ರಗತಿಯಲ್ಲಿದೆ | 45% |
| 6 | ಆರ್‌ಒಬಿಗಳು | Nos. | 1 | 0 | 30% |
| 7 | ನಿಲ್ದಾಣ ಕಟ್ಟಡ / ಸೇವಾ ಕಟ್ಟಡ | Nos. | 6 | 5 | 80% |
| 8 | ಪ್ಲಾಟ್‌ಫಾರಂ | No. | 1 | ಪ್ರಗತಿಯಲ್ಲಿದೆ | 75% |
| 9 | S&T ಕಾಮಗಾರಿಗಳು | Nos. | 6 | ಪ್ರಗತಿಯಲ್ಲಿದೆ | |
| 10 | TRD ಕಾಮಗಾರಿಗಳು | TKM | 19.40 | ಪ್ರಗತಿಯಲ್ಲಿದೆ | |
| 11 | ಹಳಿ ಜೋಡಣೆ | TKM | 19.40 | 0 | |
| 12 | ಕಾರ್ಯಾರಂಭ | TKM | 19.40 | 0 | |



ಬಾಣಸವಾಡಿ ಆರ್‌ಆರ್‌ಐ ಕಟ್ಟಡದ ಪ್ಲಿಂತ್ ಬೀಮ್ ಕಾಮಗಾರಿ



ಯಶವಂತಪುರ ಪಾರ್ಸೆಲ್ ಕಚೇರಿಯ ಹೊರಗೋಡೆ ಪ್ಲಾಸ್ಟರಿಂಗ್ ಕಾಮಗಾರಿ



ಹೆಬ್ಬಾಳ ಯಾರ್ಡ್ ಪ್ಲಾಟ್‌ಫಾರ್ಮ್‌ನ ಮಣ್ಣಿನ ಕಾಂಪ್ಯಾಕ್ಷನ್ ಕಾಮಗಾರಿ



ಯಶವಂತಪುರ ಯಾರ್ಡ್ ಅಪ್ರೋಚ್‌ನಲ್ಲಿ ಪೈಲ್ ಕ್ಯಾಪ್ ಕಾಂಕ್ರೀಟಿಂಗ್ ಕಾಮಗಾರಿ

## ದ್ವಿಪಥೀಕರಣ ಓವರ್‌ಹೆಡ್ ಎಲೆಕ್ಟ್ರಿಫಿಕೇಶನ್ (OHE) ಮತ್ತು ಸಾಮಾನ್ಯ ವಿದ್ಯುತ್ ಕಾಮಗಾರಿಗಳು ಪ್ರಗತಿಯಲ್ಲಿವೆ.



ಟವರ್ ಕಾರ್ ಪರಿಶೀಲನೆ ಮತ್ತು IOL (Insulated Overlap) ನಿರ್ಮಾಣ: ದ್ವಿಪಥೀಕರಣ ಕಾಮಗಾರಿಗಳ ಭಾಗವಾಗಿ, ಮಾರನಾಯಕನಹಳ್ಳಿ ಯಾರ್ಡ್‌ನಲ್ಲಿ IOL ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದೆ.



LC 144A (ಕನಕನಗರ)ದಲ್ಲಿ CLS ಎರೆಕ್ಷನ್ ಕಾಮಗಾರಿ ಪೂರ್ಣಗೊಂಡಿದೆ.



ಕಾರಿಡಾರ್–2 ವಿಭಾಗ–3ರ ಯುಟಿಲಿಟಿ ಶಿಫ್ಟಿಂಗ್ ಕಾಮಗಾರಿಗೆ ಸಂಬಂಧಿಸಿದಂತೆ RMU ಎರೆಕ್ಷನ್ ಕಾಮಗಾರಿ ಪೂರ್ಣಗೊಂಡಿದೆ.

## ಟೆಂಡರ್‌ಗಳು ಮತ್ತು ಅಧಿಸೂಚನೆಗಳು

| ಕ್ರ. ಸಂ. | ಕಳೆದ 2 ತಿಂಗಳಲ್ಲಿ ವಿವಿಧ ಕಾಮಗಾರಿಗಳಿಗಾಗಿ ಆಹ್ವಾನಿಸಲಾದ ಟೆಂಡರ್‌ಗಳ ವಿವರಗಳನ್ನು ಕೆಳಗೆ ನೀಡಲಾಗಿದೆ. | ಪ್ರಕಟಿಸಿದ ದಿನಾಂಕ |
|---|---|---|
| ಎ<br>1. | **ದ್ವಿಪಥೀಕರಣ ಕಾಮಗಾರಿಗಳು**<br>● **ವಿವರಣೆ:** YPR-CSDR ದ್ವಿಪಥೀಕರಣ: ಬಾಣಸವಾಡಿ ನಿಲ್ದಾಣದ ಕಟ್ಟಡದ ಆಂತರಿಕ ವಿದ್ಯುದೀಕರಣ, ಬಾಣಸವಾಡಿ ನಿಲ್ದಾಣದ ತೆರೆದ ಹಾಗೂ ಮುಚ್ಚಿದ ಪ್ಲಾಟ್‌ಫಾರ್ಮ್‌ಗಳಿಗೆ ಬೆಳಕಿನ ವ್ಯವಸ್ಥೆ ಕಲ್ಪಿಸುವುದು ಹಾಗೂ ಇತರೆ ಸಂಬಂಧಿತ ಕಾಮಗಾರಿಗಳು.<br>● **ಟೆಂಡರ್ ಮೊತ್ತ:** ₹1,40,77,876/–; **ಅವಧಿ:** 12 ತಿಂಗಳು. | 30-07-2026 |
| ಬಿ<br>2. | **ಬಿಎಸ್‌ಟಿಪಿ ಕಾಮಗಾರಿಗಳು – ಆಹ್ವಾನಿಸಲಾದ ಟೆಂಡರ್‌ಗಳು**<br>● **ವಿವರಣೆ:** ಬಿಎಸ್‌ಟಿಪಿಗಾಗಿ, ಕಾರಿಡಾರ್–2ರ ಬೆನ್ನಿಗಾನಹಳ್ಳಿ–ಯಶವಂತಪುರ ಕ್ಯಾಬಿನ್ ನಡುವಿನ ಎಲಿವೇಟೆಡ್ ವಿಭಾಗದ 7.795 ಕಿ.ಮೀ. ಉದ್ದದ ಎಲಿವೇಟೆಡ್ ವಯಾಡಕ್ಟ್ [(–) 0.675 ಕಿ.ಮೀ. ರಿಂದ 0.050 ಕಿ.ಮೀ. ಹಾಗೂ 11.230 ಕಿ.ಮೀ. ರಿಂದ 16.755 ಕಿ.ಮೀ. ಮತ್ತು 16.755 ಕಿ.ಮೀ. ರಿಂದ 18.400 ಕಿ.ಮೀ.] ಮತ್ತು RoR ಕಾಮಗಾರಿಗಳಿಗೆ ವಿವರವಾದ ವಿನ್ಯಾಸ ಸಲಹಾ ಸೇವೆಗಳು. ಇದರಲ್ಲಿ 14+562.903 ರಿಂದ 15+680.447 ರವರೆಗೆ ಡಬಲ್ ಡೆಕ್ಕರ್ ವಯಾಡಕ್ಟ್ (ರೈಲು–ರಸ್ತೆ ಫ್ಲೈಓವರ್), ಮತ್ತಿಕೆರೆಯಲ್ಲಿನ ಡಬಲ್ ಡೆಕ್ಕರ್ ನಿಲ್ದಾಣ, ಎಂಟ್ರಿ/ಎಕ್ಸಿಟ್ ರಚನೆ, ರಸ್ತೆ ಫ್ಲೈಓವರ್‌ಗಾಗಿ ರ್‍ಯಾಂಪ್, ವೈ–ಲೂಪ್ ರ್‍ಯಾಂಪ್, ಬೆನ್ನಿಗಾನಹಳ್ಳಿ ಮತ್ತು ಹೆಬ್ಬಾಳದಲ್ಲಿನ ಬಿಎಸ್‌ಟಿಪಿ ವಯಾಡಕ್ಟ್ ರ್‍ಯಾಂಪ್, YPR ಕ್ಯಾಬಿನ್ FOBಗಳು, ಮಲ್ಟಿ–ಮೋಡಲ್ ಇಂಟಿಗ್ರೇಷನ್ ಕಾಮಗಾರಿಗಳು ಹಾಗೂ ಇತರೆ ಸಂಬಂಧಿತ ಮೂಲಸೌಕರ್ಯ ಕಾಮಗಾರಿಗಳು ಸೇರಿವೆ. ಕಾರಿಡಾರ್–1ರ ಯಶವಂತಪುರದಲ್ಲಿ ಅಃ: 16+900 ರಿಂದ 18+055 ರವರೆಗೆ (P 192 / UP 192 ರಿಂದ C1-P10) ಸಬ್‌ಸ್ಟ್ರಕ್ಚರ್‌ವರೆಗೆ ಭಾಗಶಃ ಕಾಮಗಾರಿ ಹಾಗೂ ಕಾರಿಡಾರ್–4ರ 4 ರಸ್ತೆ ಮೇಲ್ಸೇತುವೆಗಳು ಮತ್ತು 1 ರಸ್ತೆ ಕೆಳಸೇತುವೆ ಕಾಮಗಾರಿಗಳೂ ಒಳಗೊಂಡಿವೆ.<br>● **ಟೆಂಡರ್ ಮೊತ್ತ:** ₹6,33,55,539/–; **ಅವಧಿ:** 36 ತಿಂಗಳು. | 18-08-2026 |

| ಕ್ರ. ಸಂ. | ಕಳೆದ 2 ತಿಂಗಳಲ್ಲಿ ವಿವಿಧ ಕಾಮಗಾರಿಗಳಿಗೆ ನೀಡಲಾದ ಗುತ್ತಿಗೆಗಳ ವಿವರಗಳನ್ನು ಕೆಳಗೆ ನೀಡಲಾಗಿದೆ. | ಗುತ್ತಿಗೆ ದಿನಾಂಕ |
|---|---|---|
| ಎ<br>1. | **ದ್ವಿಪಥೀಕರಣ ಕಾಮಗಾರಿಗಳು – ಟೆಂಡರ್‌ಗಳನ್ನು ಗುತ್ತಿಗೆಗೆ ನೀಡಲಾಗಿದೆ**<br>● **ವಿವರಣೆ:** ಬೈಯಪ್ಪನಹಳ್ಳಿ–ಹೊಸೂರು ದ್ವಿಪಥೀಕರಣ: ನೈರುತ್ಯ ರೈಲ್ವೆಯ ಬೆಂಗಳೂರು ವಿಭಾಗದ ಆನೇಕಲ್ ರಸ್ತೆ (ಹೊರತುಪಡಿಸಿ)–ಹೀಲಲಿಗೆ (ಹೊರತುಪಡಿಸಿ) ವಿಭಾಗದಲ್ಲಿ ಕಿ.ಮೀ. 173/784 ರಿಂದ ಕಿ.ಮೀ. 182/338 ರವರೆಗೆ RDSO ನಿರ್ದಿಷ್ಟೀಕರಣ (IRS-GE-1)ಕ್ಕೆ ಅನುಗುಣವಾಗಿ ಯಂತ್ರದಿಂದ ಪುಡಿಮಾಡಿದ ಟ್ರ್ಯಾಕ್ ಬ್ಯಾಲಸ್ಟ್‌ನ ತಯಾರಿಕೆ, ಪೂರೈಕೆ ಮತ್ತು ಸಂಗ್ರಹಣೆ.<br>● **LOA:** 03.09.2026ರಂದು ಮೆ॥ ಎನ್. ರಂಗನಾಥ ಅವರಿಗೆ ನೀಡಲಾಗಿದೆ. **ಗುತ್ತಿಗೆ ಮೊತ್ತ:** ₹4,01,47,500/–; **ಪೂರ್ಣಗೊಳಿಸುವ ಅವಧಿ:** 6 ತಿಂಗಳು. | 03-09-2026 |
| ಬಿ<br>2. | **ಬಿಎಸ್‌ಟಿಪಿ ಕಾಮಗಾರಿಗಳು – ಟೆಂಡರ್‌ಗಳನ್ನು ಗುತ್ತಿಗೆಗೆ ನೀಡಲಾಗಿದೆ**<br>● ವಿವರಣೆ: ಬಿಎಸ್‌ಟಿಪಿ ಕಾರಿಡಾರ್–2 ಮತ್ತು ಕಾರಿಡಾರ್–4ರ ಪ್ರಸ್ತಾವಿತ ಅಲೈನ್‌ಮೆಂಟ್‌ಗೆ ಅಡ್ಡಿಯಾಗಿರುವ 8 ಸಂಖ್ಯೆಯ ಸ್ವಿಚಿಂಗ್ ಸ್ಟೇಷನ್‌ಗಳು ಸೇರಿದಂತೆ, (ಇದರಲ್ಲಿ 6 ಸಂಖ್ಯೆಯ ಸಬ್–ಸೆಕ್ಷನಿಂಗ್ ಮತ್ತು ಪ್ಯಾರಲಲಿಂಗ್ ಪೋಸ್ಟ್‌ಗಳು ಹಾಗೂ 2 ಸಂಖ್ಯೆಯ ಸೆಕ್ಷನಿಂಗ್ ಮತ್ತು ಪ್ಯಾರಲಲಿಂಗ್ ಪೋಸ್ಟ್‌ಗಳು ಒಳಗೊಂಡಿವೆ) ಸ್ಥಳಾಂತರ / ಮಾರ್ಪಾಡಿಗಾಗಿ ವಿನ್ಯಾಸ, ಪೂರೈಕೆ, ಎರೆಕ್ಷನ್, ಪರೀಕ್ಷೆ ಮತ್ತು ಕಾರ್ಯಾರಂಭ ಕಾಮಗಾರಿ ಹಾಗೂ ಪ್ರಸ್ತಾವಿತ ಬಿಎಸ್‌ಟಿಪಿಅಲೈನ್‌ಮೆಂಟ್‌ನ ಮೇಲೆ ಇರುವ IR OHE ಅಡ್ಡಿಪಡಿಸುವಿಕೆಗಳನ್ನು ತೆರವುಗೊಳಿಸುವುದಕ್ಕೆ ಸಂಬಂಧಿಸಿದ ಮಾರ್ಪಾಡು ಕಾಮಗಾರಿಗಳು.<br>● **LOA:** 03.09.2026ರಂದು M/s Kusum Electrical Engineers Pvt. Ltd. ಅವರಿಗೆ ನೀಡಲಾಗಿದೆ. **ಗುತ್ತಿಗೆ ಮೊತ್ತ:** ₹19,24,06,196/–; ಪೂರ್ಣಗೊಳಿಸುವ **ಅವಧಿ:** 24 ತಿಂಗಳು. | 03-09-2026 |



Follow us on

# ಸುಸ್ಥಿರತೆಯ ಹಾದಿಯಲ್ಲಿ (SEMU)

## ಯಶೋಗಾಥೆ: ಪುನರ್ವಸತಿ ನೆರವಿನಿಂದ ಸ್ವಾವಲಂಬನೆಯತ್ತ – ಆರ್ಥಿಕ ಸ್ವಾತಂತ್ರ್ಯದತ್ತ ಮಹಿಳೆಯೊಬ್ಬರ ಪಯಣ



ಶ್ರೀಮತಿ ಸೋಫಿಯಾ, 38 ವರ್ಷ ವಯಸ್ಸಿನವರು, ಮಾರುತಿ ಸೇವಾನಗರದ ನಿವಾಸಿಯಾಗಿದ್ದು, ಬಿಎಸ್‌ಟಿಪಿ ಕಾರಿಡಾರ್–2ರ ಯೋಜನಾ ಬಾಧಿತ ವ್ಯಕ್ತಿ ಆಗಿದ್ದಾರೆ. ಯೋಜನೆಯಿಂದ ಅವರ ವಸತಿ ಕಟ್ಟಡವು ಬಾಧಿತವಾಗಿದ್ದು, ಅನೌಪಚಾರಿಕ ವಸತಿ ಪ್ರದೇಶಗಳಲ್ಲಿ (ಸ್ಲಂ ನಿವಾಸಿಗಳು) ವಾಸಿಸುವ ಕುಟುಂಬಗಳಿಗೆ ಅನ್ವಯವಾಗುವ ಅರ್ಹತಾ ವರ್ಗದ ಅಡಿಯಲ್ಲಿ ಅವರು ಪರಿಹಾರ ಪಡೆಯಲು ಅರ್ಹರಾಗಿದ್ದರು.

ಆಟೋ ಚಾಲಕಿಯಾಗುವ ಮೊದಲು ಸೋಫಿಯಾ ಅವರು ಮೂರು ಮನೆಗಳಲ್ಲಿ ಗೃಹಸಹಾಯಕಿಯಾಗಿ ಕೆಲಸ ಮಾಡುತ್ತಿದ್ದರು. ತಮ್ಮ ಕುಟುಂಬದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವ ದೃಢ ಸಂಕಲ್ಪದಿಂದ, ಸಾಲ ಪಡೆದು ಆಟೋರಿಕ್ಷಾವನ್ನು ಖರೀದಿಸಿ ಆಟೋ ಚಾಲಕಿಯಾಗಿ ಕೆಲಸ ಪ್ರಾರಂಭಿಸಿದರು. ಆದರೆ, ಮಾಸಿಕ ಸಾಲದ ಕಂತುಗಳು ಹಾಗೂ ಕುಟುಂಬದ ಖರ್ಚುಗಳನ್ನು ನಿರ್ವಹಿಸುವುದು ಅವರ ಕುಟುಂಬದ ಮೇಲೆ ಗಣನೀಯ ಆರ್ಥಿಕ ಒತ್ತಡವನ್ನು ಉಂಟುಮಾಡಿತು.

ಬಿ–ರೈಡ್‌ನ ಅನುಮೋದಿತ ಪರಿಹಾರ ಮತ್ತು ಪುನರ್ವಸತಿ ನೀತಿಯಡಿ, ಸ್ಲಂ ಪ್ರದೇಶದಲ್ಲಿ ವಾಸಿಸುವ ಕುಟುಂಬಕ್ಕೆ ಅನ್ವಯವಾಗುವ ಅರ್ಹತಾ ಮೊತ್ತವಾಗಿ ಸೋಫಿಯಾ ಅವರಿಗೆ ₹5 ಲಕ್ಷ ನೀಡಲಾಯಿತು. ಅವರು ಈ ನೆರವನ್ನು ವಿವೇಚನಾಪೂರ್ವಕವಾಗಿ ಬಳಸಿಕೊಂಡು, ತಮ್ಮ ಕುಟುಂಬಕ್ಕಾಗಿ ಉತ್ತಮ ಬಾಡಿಗೆ ಮನೆಯನ್ನು ಪಡೆದುಕೊಂಡರು, ಆಟೋರಿಕ್ಷಾ ಸಾಲದ ಬಾಕಿ ಮೊತ್ತವನ್ನು ಸಂಪೂರ್ಣವಾಗಿ ಮರುಪಾವತಿಸಿದರು ಹಾಗೂ ಉಳಿದ ಮೊತ್ತದ ಒಂದು ಭಾಗವನ್ನು ತುರ್ತು ಆರ್ಥಿಕ ನಿಧಿಯಾಗಿ ಉಳಿಸಿಕೊಂಡರು. ಸಾಲದ ಮರುಪಾವತಿಯಿಂದ ಅವರ ಆರ್ಥಿಕ ಹೊರೆ ಗಣನೀಯವಾಗಿ ಕಡಿಮೆಯಾಗಿ, ಅವರ ಜೀವನೋಪಾಯಕ್ಕೆ ಹೆಚ್ಚಿನ ಸ್ಥಿರತೆ ದೊರೆಯಿತು. ಪ್ರಸ್ತುತ, ಶಾಲಾ ಮಕ್ಕಳ ಪಿಕ್–ಅಪ್ ಮತ್ತು ಡ್ರಾಪ್ ಸೇವೆಗಳ ಜೊತೆಗೆ ಇತರ ಪ್ರಯಾಣಿಕರಿಗೆ ಸೇವೆ ಒದಗಿಸುವ ಮೂಲಕ ಸೋಫಿಯಾ ಅವರು ತಿಂಗಳಿಗೆ ಸರಾಸರಿ ₹30,000 ಆದಾಯ ಗಳಿಸುತ್ತಿದ್ದಾರೆ.

ಮೂರು ಹೆಣ್ಣುಮಕ್ಕಳ ತಾಯಿಯಾಗಿರುವ ಸೋಫಿಯಾ ಅವರ ಪಯಣವು ದೃಢಸಂಕಲ್ಪ, ಸ್ಥೈರ್ಯ ಮತ್ತು ಸ್ವಾವಲಂಬನೆಯ ಪ್ರತೀಕವಾಗಿದೆ. ಅವರ ಅನುಭವವು ಸಮಯೋಚಿತ ಮತ್ತು ಸೂಕ್ತವಾದ ನೆರವು ಯೋಜನಾ ಬಾಧಿತ ಮಹಿಳೆಯರ ಜೀವನಮಟ್ಟ ಸುಧಾರಿಸುವುದರ ಜೊತೆಗೆ, ಜೀವನೋಪಾಯ ಪುನಃಸ್ಥಾಪನೆ, ಆರ್ಥಿಕ ಸ್ಥಿರತೆ ಹಾಗೂ ಹೆಚ್ಚಿನ ಆರ್ಥಿಕ ಸ್ವಾತಂತ್ರ್ಯ ಸಾಧಿಸಲು ಹೇಗೆ ನೆರವಾಗುತ್ತದೆ ಎಂಬುದನ್ನು ತೋರಿಸುತ್ತದೆ.

"ಬಿ–ರೈಡ್‌ನ ಪುನರ್ವಸತಿ ನೆರವು ಸೋಫಿಯಾ ಅವರಿಗೆ ತಮ್ಮ ಜೀವನೋಪಾಯವನ್ನು ಭದ್ರಪಡಿಸಿಕೊಳ್ಳಲು, ಕುಟುಂಬದ ಆರ್ಥಿಕ ಸ್ಥಿರತೆಯನ್ನು ಬಲಪಡಿಸಲು ಹಾಗೂ ಗೌರವ, ಆತ್ಮವಿಶ್ವಾಸ ಮತ್ತು ಹೆಚ್ಚಿನ ಸ್ವಾವಲಂಬನೆಯೊಂದಿಗೆ ಮುನ್ನಡೆಯಲು ನೆರವಾಗಿದೆ."

## ಯೋಜನೆಯಿಂದ ಬಾಧಿತ ಕುಟುಂಬಗಳ ಸಾಮಾಜಿಕ–ಆರ್ಥಿಕ ಸಮೀಕ್ಷೆ ಮತ್ತು ವಿವರ ಸಂಗ್ರಹಣೆ

ಪುನರ್ವಸತಿ ಕ್ರಿಯಾ ಯೋಜನೆ (RAP) ಚಟುವಟಿಕೆಗಳ ಭಾಗವಾಗಿ, ಸೋಲದೇವನಹಳ್ಳಿ ಡಿಪೋ, ಕಾರಿಡಾರ್–4ರ ಹೆಚ್ಚುವರಿಯಾಗಿ ಅಧಿಸೂಚಿಸಲಾದ ಆಸ್ತಿಗಳು ಹಾಗೂ ಸಾಮಾನ್ಯ ಆಸ್ತಿ ಸಂಪನ್ಮೂಲಗಳು ಮತ್ತು ಅಕ್ಕಿಪೇಟೆ ಡಿಪೋ ಅಪ್ರೋಚ್ ರಸ್ತೆಗೆ ಸಂಬಂಧಿಸಿದ ಯೋಜನೆಯಿಂದ ಬಾಧಿತ ಕುಟುಂಬಗಳ ನಡುವೆ ಸಾಮಾಜಿಕ–ಆರ್ಥಿಕ ಸಮೀಕ್ಷೆಗಳನ್ನು ನಡೆಸಲಾಯಿತು. ಈ ಸಮೀಕ್ಷೆಗಳ ಮೂಲಕ ಕುಟುಂಬದ ಸದಸ್ಯರ ವಿವರಗಳು, ಜನಸಂಖ್ಯಾ ಮಾಹಿತಿ, ಜೀವನೋಪಾಯ, ಆದಾಯ ಮತ್ತು ವೆಚ್ಚ, ವಸತಿ ಹಾಗೂ ಆಸ್ತಿಯ ಸ್ಥಿತಿ, ಮೂಲಭೂತ ಸೌಲಭ್ಯಗಳ ಲಭ್ಯತೆ ಮತ್ತು ಸಾಮಾಜಿಕ ಭದ್ರತಾ ಯೋಜನೆಗಳ ವ್ಯಾಪ್ತಿಗೆ ಸಂಬಂಧಿಸಿದ ಪ್ರಮುಖ ಮಾಹಿತಿಯನ್ನು ಸಂಗ್ರಹಿಸಲಾಯಿತು. ಅಲ್ಲದೆ, ಭೂಸ್ವಾಧೀನದಿಂದ ಉಂಟಾಗಬಹುದಾದ ಸಾಮಾಜಿಕ–ಆರ್ಥಿಕ ಪರಿಣಾಮಗಳನ್ನು ಮೌಲ್ಯಮಾಪನ ಮಾಡಿ, ಪ್ರತಿ ಕುಟುಂಬದ ನಿರ್ದಿಷ್ಟ ಅಗತ್ಯಗಳು ಮತ್ತು ದುರ್ಬಲತೆಗಳನ್ನು ಗುರುತಿಸಲಾಯಿತು.

ಈ ಸಮೀಕ್ಷೆಯ ಫಲಿತಾಂಶಗಳು ಬಾಧಿತ ಕುಟುಂಬಗಳಿಗೆ ಪರಿಹಾರ, ಪುನರ್ವಸತಿ ಮತ್ತು ಪುನರ್‌ಸ್ಥಾಪನೆ (R&R) ನೆರವು, ಜೀವನೋಪಾಯ ಪುನಃಸ್ಥಾಪನಾ ಕ್ರಮಗಳು, ಕೌಶಲ್ಯಾಭಿವೃದ್ಧಿ ಅವಕಾಶಗಳು ಹಾಗೂ ಸಾಮಾಜಿಕ ಬೆಂಬಲ ಕಾರ್ಯಕ್ರಮಗಳ ಯೋಜನೆ ಮತ್ತು ಅನುಷ್ಠಾನಕ್ಕೆ ನೆರವಾಗಲಿವೆ. ನಿರಂತರ ಸಮಾಲೋಚನೆ ಮತ್ತು ಅಗತ್ಯಾಧಾರಿತ ನೆರವಿನ ಮೂಲಕ, ಬಿಎಸ್‌ಟಿಪಿಯ ಪುನರ್ವಸತಿ ಕ್ರಿಯಾ ಯೋಜನೆಯ ಅನುಷ್ಠಾನದಲ್ಲಿ ಸಮಾವೇಶಾತ್ಮಕ, ಪಾರದರ್ಶಕ ಹಾಗೂ ಜನಕೇಂದ್ರಿತ ವಿಧಾನವನ್ನು ಅಳವಡಿಸಿಕೊಳ್ಳಲು SEMU ಬದ್ಧವಾಗಿದೆ.









## ಸಾರ್ವಜನಿಕ ಸಮಾಲೋಚನೆಗಳ ಮೂಲಕ ಸಮುದಾಯದ ಸಹಭಾಗಿತ್ವ ಮತ್ತು ಸಾಮಾಜಿಕ ಸುರಕ್ಷತಾ ಕ್ರಮಗಳನ್ನು ಬಲಪಡಿಸುವುದು

ಕಾರಿಡಾರ್–2 ಮತ್ತು ಕಾರಿಡಾರ್–4ರ ಪುನರ್ವಸತಿ ಕ್ರಿಯಾ ಯೋಜನೆ (RAP) ಹಾಗೂ ಪುನರ್ವಸತಿ ಮತ್ತು ಪುನರ್‌ಸ್ಥಾಪನೆ (R&R) ಕ್ರಮಗಳ ಪ್ರಸ್ತುತ ಅನುಷ್ಠಾನದ ಭಾಗವಾಗಿ, SEMU ವತಿಯಿಂದ ಕನಕನಗರ, ಕಗ್ಗದಾಸಪುರ, ಚಿಕ್ಕಬಾಣಾವರ–ಸೋಲದೇವನಹಳ್ಳಿ ಡಿಪೋ ಮತ್ತು ಅಡ್ಡಿಗಾನಹಳ್ಳಿ ಸೇರಿದಂತೆ ವಿವಿಧ ಸ್ಥಳಗಳಲ್ಲಿ ಸಾರ್ವಜನಿಕ ಸಮಾಲೋಚನೆ ಹಾಗೂ ಮಾಹಿತಿ–ಅವಗಾಹನಾ ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು.

ಈ ಕಾರ್ಯಕ್ರಮಗಳ ಮೂಲಕ ಯೋಜನೆಯಿಂದ ಬಾಧಿತ ವ್ಯಕ್ತಿಗಳೊಂದಿಗೆ ನೇರವಾಗಿ ಸಂವಾದ ನಡೆಸಿ, ಭೂಸ್ವಾಧೀನ, ಆಸ್ತಿ ಮೌಲ್ಯಮಾಪನ, ಪರಿಹಾರ, R&R ಅರ್ಹತೆಗಳು, ದಾಖಲೆಗಳು, ಸ್ಥಳಾಂತರ ನೆರವು, ಜೀವನೋಪಾಯದ ಅವಕಾಶಗಳು ಹಾಗೂ ಕುಂದುಕೊರತೆ ಪರಿಹಾರ ವ್ಯವಸ್ಥೆ (GRM) ಕುರಿತು ಅಗತ್ಯ ಮಾಹಿತಿಯನ್ನು ಒದಗಿಸಲಾಯಿತು.

ಚಿಕ್ಕಬಾಣಾವರ–ಸೋಲದೇವನಹಳ್ಳಿ ಡಿಪೋದಲ್ಲಿ ಬಾಧಿತ ವ್ಯಕ್ತಿಗಳಿಗೆ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಸ್ವಯಂ ಉದ್ಯೋಗದ ಅವಕಾಶಗಳ ಕುರಿತು ಸಹ ಮಾಹಿತಿ ನೀಡಲಾಯಿತು. ಅಡ್ಡಿಗಾನಹಳ್ಳಿಯಲ್ಲಿ ಸರ್ಕಾರಿ ವಸತಿ ಯೋಜನೆಗಳ ಕುರಿತು ಆಯೋಜಿಸಲಾದ ಮಾಹಿತಿ–ಅವಗಾಹನಾ ಕಾರ್ಯಕ್ರಮದಲ್ಲಿ ಲಭ್ಯವಿರುವ ವಸತಿ ನೆರವು, ಅರ್ಹತೆ, ಪ್ರಯೋಜನಗಳು ಹಾಗೂ ಅರ್ಜಿ ಸಲ್ಲಿಸುವ ವಿಧಾನಗಳ ಬಗ್ಗೆ ವಿವರಿಸಲಾಯಿತು.

ವಿವಿಧ ಸಮಾಲೋಚನೆಗಳು ಮತ್ತು ಕಾರ್ಯಕ್ರಮಗಳಲ್ಲಿ ಸುಮಾರು 400 ಬಾಧಿತ ವ್ಯಕ್ತಿಗಳು ಭಾಗವಹಿಸಿದರು. ಈ ಸಮಾಲೋಚನೆಗಳು ಬಾಧಿತ ವ್ಯಕ್ತಿಗಳು ಮತ್ತು ಯೋಜನೆಯಿಂದ ಬಾಧಿತ ಕುಟುಂಬಗಳಿಗೆ ತಮ್ಮ ಸಮಸ್ಯೆಗಳನ್ನು ಪ್ರಸ್ತಾಪಿಸಲು, ಅಗತ್ಯ ಸ್ಪಷ್ಟೀಕರಣಗಳನ್ನು ಪಡೆಯಲು ಹಾಗೂ ಭೂಸ್ವಾಧೀನ ಮತ್ತು ಪುನರ್ವಸತಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ಸಂಬಂಧಿತ ಅಧಿಕಾರಿಗಳಿಂದ ಮಾರ್ಗದರ್ಶನ ಪಡೆಯಲು ವೇದಿಕೆಯನ್ನು ಒದಗಿಸಿದವು. ಇದರಿಂದ RAP ಮತ್ತು R&Rಕ್ರಮಗಳ ಅನುಷ್ಠಾನದಲ್ಲಿ ಪಾರದರ್ಶಕತೆ, ಮಾಹಿತಿಯಾಧಾರಿತ ಭಾಗವಹಿಸುವಿಕೆ, ಕುಂದುಕೊರತೆ ಪರಿಹಾರ ಹಾಗೂ ಸಮುದಾಯದ ಸಹಭಾಗಿತ್ವವನ್ನು ಮತ್ತಷ್ಟು ಬಲಪಡಿಸಲಾಯಿತು.






## ನಾಡಪ್ರಭು ಕೆಂಪೇಗೌಡ ಬಡಾವಣೆಯ (NPKL) ಪರಿಹಾರಾತ್ಮಕ ಅರಣ್ಯೀಕರಣ ಮತ್ತು ಮಿಯಾವಾಕಿ ನೆಡುತೋಪು ಪ್ರದೇಶದಲ್ಲಿ ನಿರ್ವಹಣಾ ಕಾಮಗಾರಿಗಳ ಮೂಲಕ ಸಸಿಗಳ ಆರೋಗ್ಯಕರ ಬೆಳವಣಿಗೆಯನ್ನು ಖಚಿತಪಡಿಸುವುದು

ಬಿ–ರೈಡ್‌ನ ಪರಿಹಾರಾತ್ಮಕ ಅರಣ್ಯೀಕರಣ ಚಟುವಟಿಕೆಗಳ ಭಾಗವಾಗಿ, NPKLನ 8 ಬ್ಲಾಕ್‌ಗಳಲ್ಲಿ ಸುಮಾರು 30,000 ಸಸಿಗಳನ್ನು ನೆಡಲಾಗಿದ್ದು, ಮಿಯಾವಾಕಿ ನೆಡುತೋಪು ಅಭಿವೃದ್ಧಿಪಡಿಸುವ ಉದ್ದೇಶದಿಂದ NPKLನ 6ನೇ ಬ್ಲಾಕ್‌ನಲ್ಲಿ ಸುಮಾರು 29,400 ಸ್ಥಳೀಯ ಪ್ರಭೇದಗಳ ಸಸಿಗಳನ್ನು ನೆಡಲಾಗಿದೆ. ಸಸಿಗಳ ಬೆಳವಣಿಗೆ ಹಾಗೂ ನಗರ ಅರಣ್ಯೀಕರಣದ ಈ ಪ್ರದೇಶದ ಅಭಿವೃದ್ಧಿಯನ್ನು SEMU ವತಿಯಿಂದ ಬಿಡಿಎ ಅರಣ್ಯ ವಿಭಾಗದ ಸಹಯೋಗದೊಂದಿಗೆ ಕಟ್ಟುನಿಟ್ಟಾಗಿ ಮೇಲ್ವಿಚಾರಣೆ ಮಾಡಲಾಗುತ್ತಿದ್ದು, ಹಸಿರು ಹೊದಿಕೆ ಮತ್ತು ಜೀವವೈವಿಧ್ಯತೆಯನ್ನು ಹೆಚ್ಚಿಸುವುದು, ದಟ್ಟವಾದ ಸ್ಥಳೀಯ ಪ್ರಭೇದಗಳ ನಗರ ಪರಿಸರ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವುದು ಹಾಗೂ NPKL ಪ್ರದೇಶದ ಪರಿಸರ ಸ್ಥಿತಿಸ್ಥಾಪಕತೆಯನ್ನು ಬಲಪಡಿಸುವುದು ಇದರ ಪ್ರಮುಖ ಉದ್ದೇಶವಾಗಿದೆ.

ನಿರ್ವಹಣಾ ಕಾಮಗಾರಿಗಳಲ್ಲಿ ನೆಡುತೋಪುಗಳನ್ನು ಉತ್ತಮ ಸ್ಥಿತಿಯಲ್ಲಿ ನಿರ್ವಹಿಸುವುದು ಹಾಗೂ ಸಸಿಗಳ ಬೆಳವಣಿಗೆಯನ್ನು ನಿಕಟವಾಗಿ ಮೇಲ್ವಿಚಾರಣೆ ಮಾಡುವುದಕ್ಕೆ ಆದ್ಯತೆ ನೀಡಲಾಗಿದೆ. ಖಾಲಿ ಸ್ಥಳಗಳಲ್ಲಿ ಮರುಸಸಿ ನೆಡುವಿಕೆ, ಕಳೆ ನಿರ್ವಹಣೆ, ನಿಯಮಿತ ನೀರುಣಿಸುವಿಕೆ, ಬೇಲಿ ಹಾಗೂ ರಕ್ಷಣಾ ವ್ಯವಸ್ಥೆ ಕಲ್ಪಿಸುವುದು, ಸಸಿಗಳ ಬದುಕುಳಿಯುವ ಪ್ರಮಾಣವನ್ನು ದಾಖಲಿಸುವುದು ಮತ್ತು ನಷ್ಟವಾದ ಸಸಿಗಳ ಬದಲಿಗೆ ಹೊಸ ಸಸಿಗಳನ್ನು ನೆಡುವುದು ಸೇರಿದಂತೆ ವಿವಿಧ ಚಟುವಟಿಕೆಗಳನ್ನು ಸಮಯೋಚಿತವಾಗಿ ಕೈಗೊಳ್ಳಲಾಗುತ್ತಿದೆ.

ನಿರಂತರ ನಿರ್ವಹಣೆ, ನಿಯಮಿತ ಮೇಲ್ವಿಚಾರಣೆ, ಸಮಯೋಚಿತ ಖಾಲಿ ಸ್ಥಳಗಳ ಮರುಸಸಿ ನೆಡುವಿಕೆ ಹಾಗೂ ನಷ್ಟವಾದ ಸಸಿಗಳ ಬದಲಾವಣೆಯ ಮೂಲಕ, ನೆಡುತೋಪುಗಳ ಆರೋಗ್ಯಕರ ಸ್ಥಾಪನೆ ಮತ್ತು ದೀರ್ಘಕಾಲೀನ ಬದುಕುಳಿಯುವಿಕೆಯನ್ನು ಖಚಿತಪಡಿಸಿಕೊಳ್ಳಲು ಬಿ–ರೈಡ್ ಬದ್ಧವಾಗಿದೆ. ಈ ಪ್ರಯತ್ನಗಳು NPKLನ ನೆಡುತೋಪು ಪ್ರದೇಶಗಳನ್ನು ಸಮೃದ್ಧವಾಗಿ ಬೆಳೆಯುವ ನಗರ ಹಸಿರು ಪ್ರದೇಶಗಳಾಗಿ ಪರಿವರ್ತಿಸಲು ನೆರವಾಗಲಿದ್ದು, ಜೀವವೈವಿಧ್ಯತೆಯ ವೃದ್ಧಿ, ಹಸಿರು ಹೊದಿಕೆಯ ಸುಧಾರಣೆ ಹಾಗೂ ಹೆಚ್ಚು ಸ್ಥಿತಿಸ್ಥಾಪಕ ಮತ್ತು ಸುಸ್ಥಿರ ನಗರ ಪರಿಸರ ನಿರ್ಮಾಣಕ್ಕೆ ಕೊಡುಗೆ ನೀಡಲಿವೆ.






# ನಿಮ್ಮ ಬಿಎಸ್‌ಟಿಪಿ ಬಗ್ಗೆ ತಿಳಿಯಿರಿ



## ಕಾರಿಡಾರ್–4 (ಕನಕ ಲೈನ್): ಹೀಲಲಿಗೆಯಿಂದ ರಾಜಾನುಕುಂಟೆವರೆಗೆ – 46.24 ಕಿ.ಮೀ.




### ಕಾರಿಡಾರ್–4 (ಕನಕ ಲೈನ್)



ಬಿಎಸ್‌ಟಿಪಿ ಸಿ–4 ಕನಕ ಲೈನ್, ಕರ್ನಾಟಕದ ಪ್ರಮುಖ ಪ್ರಾದೇಶಿಕ ಹೂವಾದ ಕನಕಾಂಬರದ ಹೆಸರನ್ನು ಇಡಲಾಗಿದೆ. ಇದು ಬೆಂಗಳೂರು ಉಪನಗರ ರೈಲು ಯೋಜನೆಯ ಎರಡನೇ ಆದ್ಯತೆಯ ಕಾರಿಡಾರ್ ಆಗಿದೆ.

### ಪ್ರಮುಖ ವೈಶಿಷ್ಟ್ಯಗಳು

- **ಕಾರಿಡಾರ್ ಉದ್ದ:** ಕಾರಿಡಾರ್–4, ಬೆಂಗಳೂರು ಉಪನಗರ ಸಾರಿಗೆ ಯೋಜನೆ ಹೀಲಲಿಗೆಯಿಂದ (ಹೊಸೂರು ಕಡೆಗೆ) ಚೈನೇಜ್ (–)1.214 ಕಿ.ಮೀ.ಯಿಂದ ಪ್ರಾರಂಭವಾಗಿ, ಉತ್ತರ ಭಾಗದಲ್ಲಿರುವ ರಾಜಾನುಕುಂಟೆಯಲ್ಲಿ (ದೊಡ್ಡ ಬಳ್ಳಾಪುರದ ಕಡೆಗೆ) ಚೈನೇಜ್ 46.560 ಕಿ.ಮೀ.ನಲ್ಲಿ ಕೊನೆಗೊಳ್ಳುತ್ತದೆ. ನಿಲ್ದಾಣಗಳನ್ನು ಒಳಗೊಂಡಂತೆ ಕಾರಿಡಾರ್–4ರ ಒಟ್ಟು ಉದ್ದ 47.774 ಕಿ.ಮೀ. ಆಗಿದ್ದು, ಇದರಲ್ಲಿ 13.378 ಕಿ.ಮೀ. ಉದ್ದದ ಎಲಿವೇಟೆಡ್ ವಯಾಡಕ್ಟ್ ಮತ್ತು 30.478 ಕಿ.ಮೀ. ಉದ್ದದ ಅಟ್–ಗ್ರೇಡ್ ಫಾರ್ಮೇಷನ್ ಒಳಗೊಂಡಿದೆ.
- **ನಿಲ್ದಾಣಗಳ ವಿವರ:** ಈ ಕಾರಿಡಾರ್ ಕಾರ್ಮೇಲಾರಂ, ಬೆಳ್ಳಂದೂರು ರಸ್ತೆ, ಮಾರತ್ತಹಳ್ಳಿ, ಬೆನ್ನಿಗಾನಹಳ್ಳಿ, ಚನ್ನಸಂದ್ರ, ಜಕ್ಕೂರು, ಥಣಿಸಂದ್ರ ಮತ್ತು ಯಲಹಂಕ ಜಂಕ್ಷನ್ ಮೂಲಕ ಹಾದುಹೋಗುತ್ತದೆ. ಈ ಕಾರಿಡಾರ್‌ನಲ್ಲಿ ಒಟ್ಟು 18 ನಿಲ್ದಾಣಗಳನ್ನು ಪ್ರಸ್ತಾಪಿಸಲಾಗಿದೆ. ಇವುಗಳಲ್ಲಿ 5 ನಿಲ್ದಾಣಗಳು ಎಲಿವೇಟೆಡ್ (ಬೆಳ್ಳಂದೂರು, ಮಾರತ್ತಹಳ್ಳಿ, ಹೆಣ್ಣೂರು, ಆರ್.ಕೆ. ಹೆಗ್ಡೆ ನಗರ ಮತ್ತು ಯಲಹಂಕ) ಹಾಗೂ ಉಳಿದ 13 ನಿಲ್ದಾಣಗಳು ಎಟ್–ಗ್ರೇಡ್ ಆಗಿವೆ. ಎರಡು ಇಂಟರ್‌ಚೇಂಜ್ ನಿಲ್ದಾಣಗಳಿದ್ದು, ಅವುಗಳೆಂದರೆ ಯಲಹಂಕ (ಕಾರಿಡಾರ್–1 ಮತ್ತು ಕಾರಿಡಾರ್–4) ಹಾಗೂ ಬೆನ್ನಿಗಾನಹಳ್ಳಿ (ಕಾರಿಡಾರ್–2 ಮತ್ತು ಕಾರಿಡಾರ್–4).
- **ಇಂಟರ್‌ಚೇಂಜ್ ಸಂಪರ್ಕ ಮತ್ತು ಮಲ್ಟಿ–ಮೋಡಲ್ ಏಕೀಕರಣ:** ಈ ಎರಡು ಇಂಟರ್‌ಚೇಂಜ್ ನಿಲ್ದಾಣಗಳ ಜೊತೆಗೆ, ಚನ್ನಸಂದ್ರ ಮತ್ತು ಬೆಳ್ಳಂದೂರು ನಿಲ್ದಾಣಗಳನ್ನೂ ಮಲ್ಟಿ–ಮೋಡಲ್ ಸಾರಿಗೆ ಹಬ್‌ಗಳಾಗಿ ಅಭಿವೃದ್ಧಿಪಡಿಸಲಾಗುತ್ತಿದೆ. ಇವುಗಳ ಮೂಲಕ ಭಾರತೀಯ ರೈಲ್ವೆ, ಬಿಎಂಆರ್‌ಸಿಎಲ್, ಬಿಎಂಟಿಸಿ ಹಾಗೂ ಪ್ರಮುಖ ರಸ್ತೆಗಳು / ಹೆದ್ದಾರಿಗಳೊಂದಿಗೆ ಸಂಪರ್ಕ ಕಲ್ಪಿಸಲಾಗುತ್ತದೆ.

### ಡಬಲ್ ಡೆಕ್ಕರ್ ರಚನೆಗಳು



- **ಡಬಲ್ ಡೆಕ್ಕರ್ ರಚನೆಗಳು:** ಬೆನ್ನಿಗಾನಹಳ್ಳಿ ಸಮೀಪದಲ್ಲಿ ಬಿಎಂಆರ್‌ಸಿಎಲ್ ವಿಮಾನ ನಿಲ್ದಾಣ ಮಾರ್ಗದೊಂದಿಗೆ 0.537 ಕಿ.ಮೀ. ಉದ್ದದ ಸಾಮಾನ್ಯ ರೈಲು ಕಾರಿಡಾರ್ ಅನ್ನು ಡಬಲ್ ಡೆಕ್ಕರ್ ಮಾದರಿಯಲ್ಲಿ ನಿರ್ಮಿಸಲಾಗುತ್ತಿದೆ. ಇಲ್ಲಿ ಬಿಎಸ್‌ಟಿಪಿ ವಯಾಡಕ್ಟ್ ಟಿಯರ್–1 ಮಟ್ಟದಲ್ಲಿದ್ದು, ಬಿಎಂಆರ್‌ಸಿಎಲ್ ವಯಾಡಕ್ಟ್ ಟಿಯರ್–2 ಮಟ್ಟದಲ್ಲಿದೆ. ಎರಡೂ ಸಾರಿಗೆ ವ್ಯವಸ್ಥೆಗಳು ವಿಭಿನ್ನ ಟ್ರಾಕ್ಷನ್ ವ್ಯವಸ್ಥೆಗಳನ್ನು ಹೊಂದಿರುವುದರಿಂದ, ಅಂದರೆ ಬಿಎಸ್‌ಟಿಪಿಗೆ OHE ಮತ್ತು ಬಿಎಂಆರ್‌ಸಿಎಲ್‌ಗೆ ಥರ್ಡ್ ರೈಲ್ ವ್ಯವಸ್ಥೆ ಇರುವ ಕಾರಣ, 25kV AC ಟ್ರಾಕ್ಷನ್‌ನಿಂದ 750V DC ಟ್ರಾಕ್ಷನ್ ವ್ಯವಸ್ಥೆಗೆ ಉಂಟಾಗಬಹುದಾದ ಹಸ್ತಕ್ಷೇಪದ ಕುರಿತು ತಾಂತ್ರಿಕ ಪ್ರಸ್ತಾವನೆಯ ಮೌಲ್ಯಮಾಪನಕ್ಕಾಗಿ IISc ಬೆಂಗಳೂರು ಮೂಲಕ ಅಧ್ಯಯನ ನಡೆಸಲಾಯಿತು. ಇದರ ಆಧಾರದ ಮೇಲೆ, 25kV AC OHEಯಿಂದ ಉಂಟಾಗಬಹುದಾದ ಇಂಡ್ಯೂಸ್ಡ್ ಪೊಟೆನ್ಷಿಯಲ್/ವಿದ್ಯುತ್ ಕ್ಷೇತ್ರ/ಸ್ಟ್ರೇ ಕರೆಂಟ್‌ಗಳು ಮುಂತಾದವುಗಳನ್ನು ತಪ್ಪಿಸಲು, ಮೆಟ್ರೋ ಮಾರ್ಗದ ಮೇಲಿನ ಡೆಕ್‌ನ ಕೆಳಭಾಗದಲ್ಲಿ ಅರ್ಥಿಂಗ್/ಶೀಲ್ಡಿಂಗ್ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತದೆ.
- **ನವೀನ ರಚನೆಗಳು:** ಯಲಹಂಕದಲ್ಲಿ ಬಿಎಸ್‌ಟಿಪಿ ವಿಮಾನ ನಿಲ್ದಾಣ ಮಾರ್ಗದ (ಕಾರಿಡಾರ್–1)ನೊಂದಿಗೆ ಮತ್ತೊಂದು 1.4 ಕಿ.ಮೀ. ಉದ್ದದ ಸಾಮಾನ್ಯ ರೈಲು ಕಾರಿಡಾರ್ ಅನ್ನು ಡಬಲ್ ಡೆಕ್ಕರ್ ಮಾದರಿಯಲ್ಲಿ ನಿರ್ಮಿಸಲಾಗುತ್ತಿದೆ. ಇಲ್ಲಿ ಬಿಎಸ್‌ಟಿಪಿ ಕಾರಿಡಾರ್–4ರ ವಯಾಡಕ್ಟ್ ಟಿಯರ್–1 ಮಟ್ಟದಲ್ಲಿದ್ದು, ಕಾರಿಡಾರ್–1ರ ವಯಾಡಕ್ಟ್ ಟಿಯರ್–2 ಮಟ್ಟದಲ್ಲಿದೆ.

- **ಲೆವೆಲ್ ಕ್ರಾಸಿಂಗ್‌ಗಳ ನಿರ್ಮೂಲನೆ:** ಬಿಎಸ್‌ಟಿಪಿಯ ಕಾರಿಡಾರ್–4ರ ಅಲೈನ್‌ಮೆಂಟ್‌ನಲ್ಲಿ ಒಟ್ಟು 10 ಲೆವೆಲ್ ಕ್ರಾಸಿಂಗ್‌ಗಳನ್ನು ತೆಗೆದು ಹಾಕಲಾಗುತ್ತದೆ. ಹೀಲಲಿಗೆಯಿಂದ ಕಗ್ಗದಾಸಪುರದ ನಡುವಿನ LC-125, 126, 127, 130, 134 ಮತ್ತು 136 ಹಾಗೂ ಜಕ್ಕೂರಿನಿಂದ ರಾಜಾನುಕುಂಟೆಯ ನಡುವಿನ LC-10, 17, 18 ಮತ್ತು 20ಗಳನ್ನು ರಸ್ತೆ ಮೇಲ್ಸೇತುವೆಗಳು ಮತ್ತು ರಸ್ತೆ ಕೆಳಸೇತುವೆಗಳ ನಿರ್ಮಾಣದ ಮೂಲಕ ತೆಗೆದು ಹಾಕಲಾಗುತ್ತದೆ. ಇದರಿಂದ ಸಂಚಾರಕ್ಕೆ ಸುಗಮ ಅವಕಾಶ ಕಲ್ಪಿಸುವುದರ ಜೊತೆಗೆ, ಬಾಟಲ್‌ನೆಕ್‌ಗಳನ್ನು ನಿವಾರಿಸುವ ಮೂಲಕ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲು ಸಾಧ್ಯವಾಗುತ್ತದೆ.
- **ಡಿಪೋಗಳ ಸಂಪರ್ಕ:** ಚಿಕ್ಕಬಾಣಾವರ–ಬೈಯಪ್ಪನಹಳ್ಳಿ (ಕಾರಿಡಾರ್–2), ಕೆಂಗೇರಿ–ವೈಟ್‌ಫೀಲ್ಡ್ (ಕಾರಿಡಾರ್–3) ಮತ್ತು ಹೀಲಲಿಗೆ–ರಾಜಾನುಕುಂಟೆ (ಕಾರಿಡಾರ್– 4) ಕಾರಿಡಾರ್‌ಗಳಿಗೆ ಅಗತ್ಯವಿರುವ ನಿರ್ವಹಣಾ ಸೌಲಭ್ಯಗಳನ್ನು ಜ್ಞಾನಭಾರತಿಯಲ್ಲಿ ಒದಗಿಸಲು ಪ್ರಸ್ತಾಪಿಸಲಾಗಿದೆ.



# ಬೆಂಗಳೂರು ಉಪನಗರ ಸಾರಿಗೆ ಯೋಜನೆ (ಬಿಎಸ್‌ಟಿಪಿ)

## (ಒಟ್ಟು ಮಂಜೂರಾದ ಉದ್ದ: 148.17 ಕಿ.ಮೀ.)




| S.No | BSRP CORRIDOR DETAILS | STATUS OF NUMBER OF BSRP STATIONS — PRESENT — ELEVATED | PRESENT — AT GRADE | FUTURE (AS PER DFR) — ELEVATED | FUTURE (AS PER DFR) — AT GRADE | TOTAL No. OF STATIONS |
|---|---|---|---|---|---|---|
| 1 | CORRIDOR-1 (C-1)(KSR Bengaluru City-Devanahalli) | 8 | 7 | 0 | 0 | 15 |
| 2 | CORRIDOR-1 (C-1A)(Airport Link) | 0 | 2 | 0 | 2* | 4* |
| 3 | CORRIDOR-2(C-2)(Baiyyappanahalli-Soladevanahalli) | 4 | 9 | 0 | 2 | 15 |
| 4 | CORRIDOR-3 (C-3)(Kengeri-Whitefield ) | 8+5* | 0 | 0 | 1 | 9 |
| 5 | CORRIDOR-4 (C-4)(Heelalige-Rajanukunte) | 3 | 16 | 0 | 1 | 20 |
| | Total Number of BSRP Stations | 23 | 32 | 0 | 4+2* | 59+4*+5*+2* |

(*) Indicates 4 Nos. of stations in Suburban Airport Link (including 2 nos future stn). These are not considered in total no. of BSRP stations.
(*) Indicates 5 Nos. of stations between(Bengaluru Cantt. - Whitefield: Quadrupling Project) These are not considered in total no.of BSRP stations.
● - Indicates proposed no. of additional BSRP future stations. Kindly note that these are not considered in the total no. of BSRP stations in any corridor.
# - Suburban Airport link through B K Halli Road indicated (under approval).

| S.No | BSRP INTEGRATED STATIONS | CORRIDOR NO. |
|---|---|---|
| 1 | KSR Bengaluru city | 1 & 3 |
| 2 | Yesvantapur | 1 & 2 |
| 3 | Yelahanka | 1 & 4 |
| 4 | Benniganahalli | 2 & 4 |
| 5 | Airport Trumpet | 1 & 1A |
| | Total No. of Integrated stations : | 5 |

| S.No | NAME OF THE CORRIDOR | ELEVATED (in Km) | AT GRADE (in Km) | TOTAL LENGTH (with buffer end) (in Km) |
|---|---|---|---|---|
| 1 | CORRIDOR-1 (C-1) | 21.193 | 21.516 | 42.709 |
| 2 | AIRPORT LINK(C-1A)# | 3.475 | 4.565 | 8.04 |
| 3 | CORRIDOR-2 (C-2) | 8.757 | 19.87 | 28.627 |
| 4 | CORRIDOR-3 (C-3) | 16.571 | 17.050 (QDR) | 22.074 +17.050(QDR) |
| 5 | CORRIDOR-4 (C-4) | 10.195 | 37.688 | 47.883 |
| | TOTAL LENGTH (in Km) | 53.461 | 82.329 | 141.293* |

(*)As per revised BSRP alignment plans.

## FOLLOW • LIKE • SHARE • SUBSCRIBE

| WhatsApp Channel | Instagram | Facebook | X (Twitter) | LinkedIn | YouTube |
|---|---|---|---|---|---|
| Scan the QR Code to Follow | Scan the QR Code to Follow | Scan the QR Code to Follow | Scan the QR Code to Follow | Scan the QR Code to Follow | Scan the QR Code to Subscribe |
| @KRIDE-BSTP | @KRIDE-BSTP | @KRIDE-BSTP | @KRIDE-BSTP | @KRIDE-BSTP | @KRIDE-BSTP |


**ಕ–ರೈಡ್ / ಬಿ–ರೈಡ್**

"ಸಂಪರ್ಕ ಸೌಧ", 1ನೇ ಮಹಡಿ, (ಓರಿಯನ್ ಮಾಲ್ ಎದುರು), ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು – 560 010. ದೂರವಾಣಿ: 080–24482800, ಇ–ಮೇಲ್: md@kride.in